ಅಚಲ

ತಿಂಗಳ ಪತ್ರಿಕೆ

ಜನವರಿ 2002

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,, ಬೆಂಗಳೂರು

ಅಚಲ

ಸಂಪುಟ - 17 ಸಂಚಿಕೆ - 1

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಹೊಸ ವರ್ಷದ ಶುಭಾಶಯಗಳು

ಕಳೆದ 16 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ
ಅಚಲ ವಿಳಾಸ ಬದಲಾಗಿದೆ
108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ರಾಜ್ಯ ಮಹಿಳಾ ಆಯೋಗದ ರಚನೆಗೆ ಒತ್ತಾಯ

ರಾಷ್ಟ್ರೀಯ ಮಹಿಳಾ ಆಯೋಗದ ಹೊಸ ಛೇರ್ ಪರ್ಸನ್ ಆಗಿ ಶ್ರೀಮತಿ ಪೂರ್ಣಿಮಾ ಆದ್ವಾನಿಯವರ ಆಯ್ಕೆ ಹಲವಾರು ಸಂಶಯಗಳನ್ನು ಮತ್ತು ಪ್ರಶ್ನೆಗಳನ್ನು ನಮ್ಮ ಮುಂದೆ ಒಡ್ಡಿದೆ. ಕಳೆದ ಆಗಸ್ಟ್‌ನಲ್ಲಿ ಶ್ರೀಮತಿ ಪೂರ್ಣಿಮಾ ಆದ್ವಾನಿಯವರ ಪುಸ್ತಕ 'Rape : A legal study' ಪುಸ್ತಕ ಬಿಡುಗಡೆಯಾದಾಗ ಹಲವಾರು ಮಹಿಳಾ ಸಂಘಟಕರು ಮತ್ತು ಚರಿತ್ರಕಾರರು ಇದನ್ನು ಪ್ರಬಲವಾಗಿ ಪ್ರತಿಭಟಿಸಿದ್ದರು. ಭಾರತಕ್ಕೆ ಬಂದ ಮುಸ್ಲಿಂ ಆಕ್ರಮಣಕಾರರೆಲ್ಲ ಭಾರತೀಯ ಹೆಣ್ಣುಮಕ್ಕಳ ಮೇಲೆ ಅವ್ಯಾಹತವಾಗಿ ಅತ್ಯಾಚಾರವೆಸಗಿದ್ದಾರೆ, ಎಂಬುದು ಈ ಪುಸ್ತಕದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಮುಖ್ಯ ವಿಷಯವಾಗಿದೆ. ಮುಸ್ಲಿಂ ಪೂರ್ವ ಭಾರತದಲ್ಲಿ ಹೆಣ್ಣಿನ ಸ್ಥಾನಮಾನ ಉಚ್ಛ ಸ್ಥಿತಿಯಲ್ಲಿತ್ತು, ಎಂಬುದು ಅವರ ಒಟ್ಟು ವಾದದ ತಿರುಳಾಗಿದೆ. ಈ ವಾದವೇ ಅಚಾರಿತ್ರಕವಾಗಿದ್ದು ಮಹಿಳಾ ಇತಿಹಾಸವನ್ನು ಗುರುತಿಸುವಲ್ಲಿ ಸಾಕಷ್ಟು ತಪ್ಪು ಹೆಜ್ಜೆಗಳನ್ನು ಇಡುವಂತಿರುವ ಕಾರಣ ಮಹಿಳಾ ಸಂಘಟನೆಗಳು ಆಗಿನ ಆಯೋಗದ ಅಧ್ಯಕ್ಷರಾಗಿದ್ದ ವಿಭಾಪಾರ್ಥಸಾರಥಿಯವರಿಗೆ ಮನವಿ ಸಲ್ಲಿಸಿ ಈ ಅಮಾನವೀಯವಾದ ಮತ್ತು ಅಚಾರಿತ್ರಿಕವಾದ ಅಂಶಗಳಿರುವ ಪುಸ್ತಕದ ವಿರುದ್ಧ ಕ್ರಮತೆಗೆದುಕೊಳ್ಳಲು ಒತ್ತಾಯಿಸಿದ್ದರು. ಆ ನಂತರ ಪುಸ್ತಕದಲ್ಲಿ ಈ ಕೆಲವು ಭಾಗಗಳನ್ನು ತೆಗೆದುಹಾಕಲಾಯಿತೆಂದು ತಿಳಿದು ಬಂದಿದೆ. ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಆಯೋಗದ ಅಧ್ಯಕ್ಷಗಿರಿಗೆ ಪೂರ್ಣಿಮಾ ಆದ್ವಾನಿಯವರನ್ನು ಆಯ್ಕೆ ಮಾಡಿರುವುದು ಕೇಂದ್ರಸರ್ಕಾರದ ಪ್ರಮುಖ ಪಕ್ಷವು ಪ್ರತಿಪಾದಿಸುವ 'ಹಿಂದೂತ್ವ'ದ ರಾಜಕೀಯಕ್ಕೆ ಪೋಷಕ ದ್ರವ್ಯವನ್ನು ಒದಗಿಸಿದುದಕ್ಕೆ ಉಡುಗೊರೆಯೆಂದೇ? ಎಂಬುದು ಹಲವರ ಅನುಮಾನವಾಗಿದೆ.

ಕೇಂದ್ರ ಆಯೋಗದ ಕಥೆ ಇದಾದರೆ, ಇಂದು ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಎರಡು ವರ್ಷಗಳೇ ಸಂದಿವೆ. ಆದರೂ ಈ ಅವಧಿಯಲ್ಲಿ ರಾಷ್ಟ್ರ ಮಹಿಳಾ ಆಯೋಗವನ್ನು ರಚಿಸುವತ್ತ ಸರ್ಕಾರ ಗಮನ ಹರಿಸಿಲ್ಲ. ಅದರ ಬದಲು ಮಹಿಳಾ ಟಾಸ್ಕ್ ಫೋರ್ಸನ್ನು ರಚಿಸಿದೆಯೇ ಎಂಬ ಅನುಮಾನ ಎಲ್ಲರಿಗೂ ಬಂದಿದೆ. ಶಾಸನಬದ್ಧವಾದ ಮಹಿಳಾ ಆಯೋಗದ ಎಲ್ಲ ಕಾರ್ಯಗಳನ್ನು ಮಹಿಳಾ ಟಾಸ್ಕ್ ಫೋರ್ಸ್ ಮಾಡಲು ಸಾಧ್ಯವಿಲ್ಲ, ಕಳೆದ ಎರಡು ವರ್ಷಗಳ ಅವಧಿಯಲ್ಲಿ ಹೆಣ್ಣಿನ ಮೇಲಿನ ದೌರ್ಜನ್ಯಗಳ ಸರಮಾಲೆಯೇ ನಡೆದಾಗ ಮಹಿಳಾ ಆಯೋಗದ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಬಳ್ಳಾರಿಯ ವಣೇನೂರು ಗ್ರಾಮದ ಎರ್ರೆಮ್ಮನನ್ನು ಬೆತ್ತಲೆಗೊಳಿಸಿ, ಅಪಮಾನಿಸಿದ ಸಂದರ್ಭದಲ್ಲಿ ಮಹಿಳಾ ಆಯೋಗದ ಗೈರು ಹಾಜರಿ ಎದ್ದು ಕಾಣಿಸಿತಲ್ಲದೆ, ಮಹಿಳಾ ಟಾಸ್ಕ್ ಫೋರ್ಸ್ ಈ ಬಗ್ಗೆ ಏನು ಮಾಡಿತು? ದಿನನಿತ್ಯ ನಡೆಯುತ್ತಿರುವ ವರದಕ್ಷಿಣೆ ಸಾವುಗಳು, ಅತ್ಯಾಚಾರ ಪ್ರಸಂಗಗಳು ಹೆಚ್ಚಾಗುತ್ತಲೇ ಇವೆ. ಈ ಸಂಬಂಧವಾಗಿ ಅಪರಾಧಿಗಳನ್ನು ಹಿಡಿದು ಶಿಕ್ಷಿಸುವಲ್ಲಿ ಪೋಲೀಸ್ ಇಲಾಖೆ ನಿಷ್ಕ್ರಿಯವಾಗಿದೆ. ಈ ಸರ್ಕಾರಿ ಯಂತ್ರಗಳ ಕಾರ್ಯ ಚಟುವಟಿಕೆಯ ಮೇಲೆ ನಿಗಾವಹಿಸಲು ಮಹಿಳಾ ಆಯೋಗದ ಅವಶ್ಯಕತೆಯಿದೆ. ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳಗಳನ್ನು ತಡೆಯಲು 'ದೂರು ಸಮಿತಿ'ಯನ್ನು ರಚಿಸಬೇಕೆಂದು ಸುಪ್ರೀಂಕೋರ್ಟು ನಿರ್ದೇಶನ ನೀಡಿದ್ದರೂ ಹಲವಾರು ಸರ್ಕಾರಿ ಇಲಾಖೆ, ಕಛೇರಿಗಳಲ್ಲೇ ದೂರು ಸಮಿತಿಯ ರಚನೆಯಾಗಿಲ್ಲ, ಇನ್ನು ಖಾಸಗಿ ವಲಯಗಳಲ್ಲಿನ ಪರಿಸ್ಥಿತಿಯನ್ನು ವಿವರಿಸಬೇಕಿಲ್ಲ.

ಗುಲಬರ್ಗಾ ಮತ್ತು ಹೈದರಾಬದ್‌ನ ಗಡಿಭಾಗಗಳಲ್ಲಿ ನಡೆದ ಲಂಬಾಣಿ ತಾಂಡಗಳ ಮಕ್ಕಳನ್ನು ದತ್ತು ತೆಗೆದುಕೊಂಡು ವಿದೇಶಕ್ಕೆ ರವಾನಿಸುತ್ತಿದ್ದ ಕಳ್ಳವ್ಯವಹಾರಗಳ ವಿರುದ್ದ ಇಲ್ಲಿನ ಸ್ಥಳಿಯ ಮಹಿಳಾ ಸಂಘಟನೆಗಳು ಕೇಂದ್ರ ಆಯೋಗಕ್ಕೆ ದೂರಿತ್ತಾಗ ರಾಷ್ಟ್ರೀಯ ಮಹಿಳಾ ಆಯೋಗವು ಸ್ಥಳಕ್ಕೆ ಭೇಟಿ ನೀಡಿತ್ತು. ಇಂತಹ ಸಂದರ್ಭಗಳಲ್ಲಿ ರಾಜ್ಯ ಮಹಿಳಾ ಆಯೋಗದ ಅವಶ್ಯಕತೆ ಎಷ್ಟೆಂದು ಹೇಳಬೇಕಾಗೇ ಇಲ್ಲ. ದೈನಂದಿನ ಬದುಕಿನಲ್ಲಿ ನಡೆಯುತ್ತಿರುವ ಮಹಿಳೆಯರ ಮೇಲಿನ ಹಲವಾರು ದೌರ್ಜನ್ಯಗಳನ್ನು ಕುರಿತು ದೂರು ಸಲ್ಲಿಸಲು, ಪರಿಹಾರ ನಿರೀಕ್ಷಿಸಲು ರಾಜ್ಯ ಮಹಿಳಾ ಆಯೋಗದ ಸಮಿತಿಯ ರಚನೆ ತೀರ ಅಗತ್ಯವಾಗಿದೆ. ಇದನ್ನು ಮಹಿಳಾ ಸಂಘಟನೆಗಳು ವಿವಿಧ ವೇದಿಕೆಗಳಲ್ಲಿ ಒತ್ತಾಯಿಸುತ್ತಲೇ ಬಂದಿವೆ.

'ಸ್ತ್ರೀಶಕ್ತಿ' ಕಾರ್ಯಕ್ರಮ, ಸಶಕ್ತರಾದ ಮಹಿಳೆಯರಿಗೆ ಸನ್ಮಾನ ಇಂತಹುದೇ ಕಾರ್ಯಕ್ರಮಗಳಲ್ಲಿ ಮಗ್ನರಾಗಿರುವ ನಮ್ಮ ಮುಖ್ಯಮಂತ್ರಿಗಳು ಇನ್ನಾದರೂ ರಾಜ್ಯದಲ್ಲಿ ಮಹಿಳಾ ಆಯೋಗದ ಸಮಿತಿಯನ್ನು ರಚಿಸುವರೇ? ಇಲ್ಲ ಅದಕ್ಕೂ ಒಂದು ಹೋರಾಟದ ಅಗತ್ಯವಿದೆಯೇ ಎಂಬುದು ಹೊಸವರ್ಷದಲ್ಲಿ ಎದುರಾದ ಮುಖ್ಯ ಸವಾಲಾಗಿದೆ.

- ಎನ್. ಗಾಯಿತ್ರಿ

ಸಶಸ್ತ್ರ ಮಹಿಳಾ ಪಡೆಯನ್ನೇ ನಿರ್ಮಿಸಿ ಹೋರಾಡಿದ - ಬೆಳವಡಿ ಮಲ್ಲಮ್ಮ

ಭಾರತೀಯ ಸೇನೆ ಮಹಿಳೆಯರಿಗೆ ಬಾಗಿಲು ತೆಗೆಯಲು 1992ರವರೆಗೂ ಕಾಯಬೇಕಾಯಿತು. ಇಂದಿಗೂ, 'ಮಹಿಳೆಯರನ್ನು ಯುದ್ಧದ ಕೆಲಸಗಳಿಗೆ ಕಳುಹಿಸಲು ಹೇಗೆ ಸಾಧ್ಯ?' ಎಂದು ಸೇನೆ ಮೀನಾಮೇಷಾ ಎಣಿಸುವಾಗ, ರಣರಂಗದಲ್ಲಿ ಹೋರಾಡಿ ಗೆದ್ದ, ಹೋರಾಡಿ ಮಡಿದ ವೀರ ನಾರಿಯರನ್ನು ಸ್ಮರಿಸುವುದು, ಸೂಕ್ತವಾಗಬಹುದು. ಕನ್ನಡ ನಾಡಿನಲ್ಲಿಯೇ ಅನೇಕ ವೀರ ರಮಣಿಯರು ಜನ್ಮ ತಳೆದರು. ಧೈರ್ಯ ಸಾಹಸದಿಂದ ಮೆರೆದರು. ಪುರುಷ ಪ್ರಧಾನ ಇತಿಹಾಸದಲ್ಲಿ ಅವರ ಹೆಸರುಗಳು ಎದ್ದು ಕಾಣದಿದ್ದರೂ, ಕರ್ನಾಟಕದ ಈ ವೀರ ಚರಿತ್ರೆಯನ್ನು ನೆನಪಿಸಿಕೊಳ್ಳುವ ಅಗತ್ಯವಿದೆ. ಈ ನೆಲದಲ್ಲಿ ಸಾವಿಯಬ್ಬೆ, ಚಾಗಲದೇವಿ, ಚೊಮ್ಮರಾಂಬೆ ಮೊದಲಾದವರು ರಣರಂಗದಲ್ಲಿ ಹೋರಾಡಿ ವೀರಸ್ವರ್ಗವನ್ನು ಪಡೆದರು. ಚಾಲುಕ್ಯರಾಣಿ ಕೇತಲದೇವಿ, ಹೊಯ್ಸಳ ರಾಣಿ ಉಮಾದೇವಿ, ಮುಂತಾದವರು ಸೈನ್ಯದ ಮುಂದಾಳತ್ವವನ್ನು ವಹಿಸಿಕೊಂಡು ಜಯ ಗಳಿಸಿದರು. ಪೋರ್ಚುಗೀಸರಿಗೆ ಬುದ್ಧಿಕಲಿಸಿದ ಅಬ್ಬಕ್ಕದೇವಿ, ಚೆನ್ನಭೈರಾದೇವಿಯವರ, ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರ ರಾಣಿ ಚೆನ್ನಮ್ಮರ ಸಾಹಸ ತಿಳಿದಿದೆ. ತನ್ನ ಕೆಚ್ಚು-ಶೌರ್ಯಗಳಿಂದ ಶಿವಾಜಿಯನ್ನೇ ಬೆರಗುಗೊಳಿಸಿದ ಬೆಳವಡಿ ಮಲ್ಲಮ್ಮನ ಕತೆ ನಿಜಕ್ಕೂ ಕುತೂಹಲದ್ದು. 'ವಿಶ್ವದಲ್ಲಿಯೇ ಮೊಟ್ಟಮೊದಲಿಗೆ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಮಹಿಳಾ ಪಡೆಯನ್ನೇ ತರಬೇತುಗೊಳಿಸಿ ರೂಪಿಸಿದ್ದು - ಬೆಳವಡಿ ಮಲ್ಲಮ್ಮ' ಎಂದು ಪ್ರೊ. ಚಿದಾನಂದ ಮೂರ್ತಿಯವರು ಉಲ್ಲೇಖಿಸುತ್ತಾರೆ. 'ಕನ್ನಡ ಶಕ್ತಿ ಕೇಂದ್ರ' ಪ್ರಕಟಿಸಿರುವ 'ಅಜೇಯ ರಾಣಿ ಬೆಳವಡಿ ಮಲ್ಲಮಾಜ' ಪುಸ್ತಕದಿಂದ ಆಯ್ದುಕೊಂಡ ಭಾಗವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಮೂಲ ಮರಾಠಿ ಕೃತಿಯ ಕನ್ನಡಾನುವಾದವನ್ನು ಶ್ರೀಮತಿ ಶಾರದಾ ಆದ್ಯ ರಂಗಾಚಾರ್ಯ ಮತ್ತು ಶ್ರೀಮತಿ ತಾರಾ ದೀಕ್ಷಿತ್ ಅವರು ಮಾಡಿದ್ದಾರೆ.

★ ★ ★

ಶಿವಾಜಿಯು ಕರ್ನಾಟಕ ದಂಡಯಾತ್ರೆಯಿಂದ ಮಹಾರಾಷ್ಟ್ರಕ್ಕೆ ಹಿಂತಿರುಗಬೇಕಾದರೆ ಬೆಳಗಾಂ ಜಿಲ್ಲೆಯ ಸಂಪಗಾಂ ತಾಲೂಕಿನ ಬೆಳವಡಿಯ ದೇಸಾಯಿಣಿ ಮಲ್ಲಮ್ಮನೊಡನೆ ಯುದ್ಧ ಮಾಡಬೇಕಾಯಿತು. ಮಲ್ಲಮ್ಮನ ಶೌರ್ಯವನ್ನು ಮೆಚ್ಚಿ ಶಿವಾಜಿ ಆಕೆಯನ್ನು ಗೌರವಿಸಿದ. ಶಿವಾಜಿಯಿಂದ ಮಲ್ಲಮ್ಮನನ್ನು ಸೋಲಿಸಲಿಕ್ಕೆ ಆಗಲಿಲ್ಲ ಎಂಬ ಮಾತನ್ನು ಬಹಳಷ್ಟು ಇತಿಹಾಸಕಾರರು ನಂಬುವುದಿಲ್ಲ. ಆದರೆ ಇದೇ ಮಾತನ್ನು ಆಗಿನ ಕಾಲದ ಇಂಗ್ಲಿಷ್ ವರ್ತಕರು ತಮ್ಮ ದಾಖಲೆಯೊಂದರಲ್ಲಿ ಬರೆದಿದ್ದಾರೆ ಎಂದು ಈ ಪುಸ್ತಕ ತಿಳಿಸುತ್ತದೆ. ಶಿವಾಜಿ ಮತ್ತು ಮಲ್ಲಮ್ಮನ ನಡುವೆ ರಾಜಿಯಾದ ಸನ್ನಿವೇಶವನ್ನು ಧಾರವಾಡ ಜಿಲ್ಲೆಯ ಯಾದವಾಡದಲ್ಲಿರುವ ಒಂದು ಶಿಲ್ಪದಲ್ಲಿ ಚಿತ್ರಿಸಲಾಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಸಿರಸಿಯಿಂದ ಉತ್ತರಕ್ಕೆ ಯಲ್ಲಾಪುರಕ್ಕೆ ಹೋಗುವ ದಾರಿಯಲ್ಲಿ ಸೋದಿ ಎಂಬ ಊರು ಸಿಗುತ್ತದೆ. ಹದಿನೇಳನೇ ಶತಮಾನದಲ್ಲಿ ಸೋದಿಯನ್ನು ನಾಯಕ ವಂಶ ಆಳುತ್ತಿತ್ತು.

ಸೋದಿಯ ರಾಜ ಮಧುಲಿಂಗ ಮತ್ತು ಆತನ ಪತ್ನಿ ವೀರಮ್ಮಾಜಿಗೆ ಕ್ರಿ.ಶ. 1650ರಲ್ಲಿ ಹುಟ್ಟಿದ ಕೂಸು ಮಲ್ಲಮ್ಮ. ಮಲ್ಲಮ್ಮನಲ್ಲಿ ರೂಪ ಬುದ್ಧಿವಂತಿಕೆ ಎರಡೂ ಮೇಳೈಸಿತ್ತು. ಈಕೆ ಐದು ವರ್ಷದವಳಾದ ಕೂಡಲೆ, ಅಣ್ಣ ಸದಾಶಿವನಾಯಕನ ಜೊತೆಗೆ ಈಗೆಗೂ ಓದುಬರಹ ಕಲಿಸಲು ಆರಂಭಿಸಿದರು. ಮಲ್ಲಮ್ಮ ಕನ್ನಡ, ಮರಾಠಿ, ಉರ್ದು ಮತ್ತು ಸಂಸ್ಕೃತ ಭಾಷೆಗಳನ್ನು ಓದಿ ಬರೆಯಲು ಕಲಿತಳು. ಮಲ್ಲಮ್ಮ ಬಹಳಷ್ಟು ಮೇಧಾವಿ. ಹನ್ನೆರಡನೇ ವಯಸ್ಸಿನಲ್ಲಿಯೇ ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿ ಕವಿತೆ ರಚಿಸತೊಡಗಿದ್ದಳು. ತಂದೆ ಮಲ್ಲಮ್ಮನಿಗೂ ಯುದ್ಧವಿದ್ಯೆನ್ನು ಕಲಿಸಲು ಶುರುಮಾಡಿದನು. ಇದಕ್ಕಾಗಿ ರಣವೀರ ಸಿಂಗ್ ಎಂಬ ವೀರಯೋಧನನ್ನು ನೇಮಿಸಿದನು. ಮಲ್ಲಮ್ಮ ಕತ್ತಿವರಸೆಯನ್ನು ಕಲಿತಳು, ಧನುರ್ವಿದ್ಯೆಯಲ್ಲಿ ದಿಟ್ಟೆಯಾದಳು. ಗುರಿ ಇಟ್ಟು ಭಲೆಯನ್ನು ಎಸೆಯುತ್ತಿದ್ದಳು. ಬಾಲ್ಯದಿಂದಲೂ ತನ್ನ ಶೂರತನವನ್ನು ತೋರಿಸಿದ ಮಲ್ಲಮ್ಮ ಅತ್ಯಂತ ಪರಾಕ್ರಮಿಯಾಗಿ ಬೆಳೆದಳು.

ಮಲ್ಲಮ್ಮನ ಹದಿನಾರನೇ ವಯಸ್ಸಿಗೇ ಆಕೆಯ ಮದುವೆಯನ್ನು ಬೆಳವಡಿಯ ರಾಜಕುಮಾರ ಈಶಪ್ರಭುವಿನೊಂದಿಗೆ ಮಾಡಲಾಯಿತು. ಈಶಪ್ರಭು ಮತ್ತು ಮಲ್ಲಮ್ಮ ಇಬ್ಬರೂ ರಾಜ್ಯ ಕಾರಭಾರವನ್ನು ಬಹಳ ದಕ್ಷತೆಯಿಂದ

ನೋಡಿಕೊಳ್ಳತೊಡಗಿದರು. ಮಲ್ಲಮ್ಮನ ನೇತೃತ್ವದಲ್ಲಿ ಸಶಸ್ತ್ರ ಸ್ತ್ರೀಸೈನಿಕ ಪಡೆಯಿತ್ತು. ಒಮ್ಮೆ ರಾಜದಂಪತಿಗಳು ಸೋದಿಗೆ ಹೋಗಿದ್ದ ಸಮಯ. ಅಲ್ಲಿ ಒಂದು ವಾರ ಇದ್ದು, ಅಲ್ಲಿಂದ ಅವರಿಬ್ಬರೇ ಗೋಕರ್ಣಕ್ಕೆ ಮಹಾಬಲೇಶ್ವರನ ದರ್ಶನಕ್ಕೆ ಹೊರಟರು. ದೇವರ ದರ್ಶನ ಮುಗಿಸಿ, ಈಶಪ್ರಭು ಮತ್ತು ಮಲ್ಲಮ್ಮ ಕುದುರೆಯನ್ನೇರಿ ಸೋದಿಯ ಕಡೆಗೆ ಹೊರಟರು. ದಾರಿಯಲ್ಲಿ ಸರೋವರವೊಂದನ್ನು ಕಂಡು, ಕುದುರೆಯಿಂದ ಕೆಳಗಿಳಿದು ಫಲಾಹಾರ ಮಾಡಿ, ಈಶಪ್ರಭು ತುಸು ನಿದ್ರೆ ಹೋದ ಸಮಯ. ಇಷ್ಟರಲ್ಲಿ ಎರಡು ಹುಲಿಗಳು ಇವರತ್ತ ಹಾದು ಬಂದವು. ಒಂದು ಕುದುರೆಯ ಕಡೆಗೆ ಹೋದರೆ, ಮತ್ತೊಂದು ಮಲ್ಲಮ್ಮನ ಮೇಲೆ ಎಗರಿ ಬಂತು. ಮಲ್ಲಮ್ಮ ಹುಲಿಯನ್ನು ಕತ್ತಿಯಿಂದ ಹೊಡೆದು ಕೊಂದು, ಕುದುರೆಯ ಕಡೆ ಹೋಗಿದ್ದ ಹುಲಿಯನ್ನು ಭರ್ಜಿಯಿಂದ ಹೊಡೆದು ಕೊಂದಳು. ಈಶಪ್ರಭುವಿಗೆ ಎಚ್ಚರವಾಗುವ ಹೊತ್ತಿಗೆ ಎರಡೂ ಹುಲಿಗಳೂ ಸತ್ತು ಬಿದ್ದಿದ್ದವು.

1677ರಲ್ಲಿ ಮಲ್ಲಮ್ಮನಿಗೆ ಗಂಡು ಮಗು ಹುಟ್ಟಿತು. 1676-78 ಈ ಎರಡು ವರ್ಷಗಳಲ್ಲಿ ಶಿವಾಜಿಯು ಕರ್ನಾಟಕ, ರಾಯಲಸೀಮೆ ಮತ್ತು ಉತ್ತರ ತಮಿಳು ನಾಡುಗಳ ಮೇಲೆ ದಂಡೆತ್ತಿ ಬಂದಿದ್ದ.

ಶಿವಾಜಿಯ ಹತ್ತಿರ 50,000 ಸೈನ್ಯವಿತ್ತು. ಶಿವಾಜಿಯು ಯಾದವಾಡದಲ್ಲಿ ಪಾಳೆ ಹೂಡಿದ ವಿಷಯ, ಅದರ ಅಧಿಪತಿಯಾದ ಬೆಳವಡಿಯ ಈಶಪ್ರಭುವಿಗೆ ತಿಳಿಯಿತು. ಆತನಿಗೆ ಶಿವಾಜಿಯನ್ನು ಸತ್ಕರಿಸುವ ಆಸೆಯಾಯಿತು. ಆದರೆ ಈಶಪ್ರಭುವಿನ ಮನಸ್ಸಿನಲ್ಲಿದ್ದಂತಾಗಲಿಲ್ಲ. ಶಿವಾಜಿಯ ಸೈನಿಕರು ಬೆಳವಡಿಯ ಸುತ್ತಮುತ್ತಲಿನ ಹಳ್ಳಿಗಳಲ್ಲಿಯ ಹಸು, ಎಮ್ಮೆಗಳನ್ನು ಹೊಡೆದುಕೊಂಡು ಹೋದರು. ರೈತರಿಗೆ ಕಿರುಕುಳ ಕೊಡಲಾರಂಭಿಸಿದರು. ಇದನ್ನು ಕೇಳಿ ಈಶಪ್ರಭು ಸಿಟ್ಟಿನಿಂದ ಯುದ್ಧಕ್ಕೆ ಸಿದ್ಧನಾಗತೊಡಗಿದನು. ಆದರೆ ಮಲ್ಲಮ್ಮ ಆತನನ್ನು ತಡೆದು 'ಯುದ್ಧಕ್ಕೆ ನೀವು ಹೋಗಬೇಡಿ ನಾನು ಸ್ತ್ರೀಯರ ಸೈನ್ಯವನ್ನು ತೆಗೆದುಕೊಂಡು ಹೋಗಿ ಮರಾಠೆಯವರಿಗೆ ಒಂದು ಕೈ ತೋರಿಸುತ್ತೇನೆ' ಎಂದು ಹೇಳಿ 2000 ಸ್ತ್ರೀಯ ಸೈನ್ಯವನ್ನು ತಯಾರು ಮಾಡಿಕೊಂಡು ಯುದ್ಧಕ್ಕೆ ಹೊರಟಳು. ಮರಾಠ ಸೈನಿಕರನ್ನು ಗಾಯಗೊಳಿಸಿದಳು. ಹತ್ತನೆರಡು ಸೈನಿಕರು ಸಾವಿಗೀಡಾದರು. ಮರಾಠ ಸೈನಿಕರು ಹೆದರಿ, ಅವರ ಸೇನಾಪತಿಯು ಜಾನುವಾರುಗಳನ್ನು ವಾಪಾಸು ಕೊಡಲು ಒಪ್ಪಿದನು. ಮಲ್ಲಮ್ಮ ಎಲ್ಲ ಜಾನುವಾರುಗಳನ್ನು ತೆಗೆದುಕೊಂಡು ತನ್ನ ಸೈನ್ಯದೊಡನೆ ಹಿಂತಿರುಗಿ, ವಿಜಯೋತ್ಸವವನ್ನು ಆಚರಿಸಿದಳು.

ಆದರೆ ಈ ವರ್ತಮಾನದಿಂದ ಛತ್ರಪತಿ ಶಿವಾಜಿ ಕೆರಳಿದ. 'ಈಗಿಂದೀಗಲೆ ಬೆಳವಡಿಯನ್ನು ಆಕ್ರಮಿಸಿ ಈಶಪ್ರಭುವನ್ನು ಸೆರೆಹಿಡಿದು ಕರೆತನ್ನಿ. ಆದರೆ ಆತನಿಗೆ ಪೆಟ್ಟು ಮಾಡಬೇಡಿ' ಎಂದು ಆಜ್ಞಾಪಿಸಿದ. ಈಶಪ್ರಭು, ಸದಾಶಿವ ನಾಯಕನಿಗೆ ಸೈನ್ಯ ಮತ್ತು ಅನ್ನ ಸಾಮಗ್ರಿಯನ್ನು ಕಳುಹಿಸಲು ಹೇಳಿ ಕಳುಹಿಸಿದ್ದ. ಆದರೆ ಸಕಾಲಕ್ಕೆ ಸಹಾಯ ಒದಗಿ ಬರಲಿಲ್ಲ. ಮರಾಠರ ದೊಡ್ಡ ಸೈನ್ಯದ ಎದುರು ಈಶಪ್ರಭುವಿನ ಸಣ್ಣ ಸೈನಿಕರ ಪಡೆ ಯುದ್ಧ ಮಾಡಿತು. ತೋಪು ಮುಗಿದು ಹೋಯಿತು. ಈಶಪ್ರಭುವಿಗೆ ಭಾರೀ ಗಾಯಗಳಾದವು. ಚಿಂತಾಜನಕ ಸ್ಥಿತಿಯಲ್ಲಿದ್ದ ಆತನನ್ನು ಸೇನಾಪತಿ ಉಪಚರಿಸಿದ. ಮಲ್ಲಮ್ಮ ತನ್ನ ಸೈನ್ಯದೊಂದಿಗೆ ಬೇರೆ ಕಡೆ ಯುದ್ಧ ಮಾಡುತ್ತಿದ್ದಳು. ಇಷ್ಟರಲ್ಲಿ ಹೂಲಿ ಕಡೆಯ ಸೈನ್ಯ ಸಹಾಯಕ್ಕೆ ಬಂತು. ಎರಡೂ ಸೇನೆಗಳು ಸೇರಿ ಮರಾಠರಿಗೆ ಸಾಕಷ್ಟು ಹಾನಿ ಮಾಡಿದವು. ಮರಾಠರ ಮದ್ದುಗುಂಡುಗಳು ಮುಗಿದು ಅವರು ಓಡಲಾರಂಭಿಸಿದಾಗ, ಮಲ್ಲಮ್ಮ ಬೆನ್ನಟ್ಟಲು ಬಯಸಿದಳು. ಅಷ್ಟರಲ್ಲಿ ಸರದಾರರು ಈಶಪ್ರಭುವಿನ ಸ್ಥಿತಿಯನ್ನು ಆಕೆಗೆ ತಿಳಿಸಿದರು.

ಪತಿಯ ಬಳಿಗೆ ಬಂದ ಮಲ್ಲಮ್ಮ ಕಂಡ ದೃಶ್ಯ ಭಯಾನಕವಾಗಿತ್ತು. ಪತಿ ಮೃತ್ಯುವಿನ ದವಡೆಯಲ್ಲಿದ್ದ. ಸಾವಿನಂಚಿನಲ್ಲಿದ್ದ ಈಶಪ್ರಭು 'ರಾಣಿ, ನಿನ್ನ ಪರಾಕ್ರಮ ನಮಗೆ ಬಹಳ ದಿನಗಳಿಂದ ಪರಿಚಿತವಿದೆ. ನೀನು ಶಿವಾಜಿಯನ್ನು ಗೆಲ್ಲಬೇಕು' ಎಂದು ಹೇಳಿ ಕಣ್ಣು ಮುಚ್ಚಿದ.

ಶಿವಾಜಿಯು, ಊರಿನ ಬಳಿಯ ಸಿದ್ಧಸಮುದ್ರ ಎಂಬಲ್ಲಿ ದ್ಯಾಮವ್ವನೆಂಬ ಹೆಸರಿನ ಜಗದಂಬಾ ದೇವತೆಯ ದರ್ಶನಕ್ಕೆ ಬರುವ ವಿಷಯ ಸರದಾರ ಶಾಂತಯ್ಯನಿಂದ ಮಲ್ಲಮ್ಮನಿಗೆ ತಿಳಿಯಿತು. ರಾಣಿಯು ಯುದ್ಧದ ಪೋಷಾಕನ್ನು ಧರಿಸಿ ಲೋಹದ ಕವಚವನ್ನು ಹಾಕಿಕೊಂಡು, ತನ್ನ ಪತಿ ಈಶಪ್ರಭುವಿನ ಕಿರೀಟವನ್ನು ಏರಿಸಿ, ಕೈಯಲ್ಲಿ ಕತ್ತಿ ಮತ್ತು ಭಲ್ಲೆಯನ್ನು ತೆಗೆದುಕೊಂಡು, ಮಗುವನ್ನೂ ಬೆನ್ನಿಗಿಟ್ಟುಕೊಂಡು ಕುದುರೆಯನ್ನೇರಿ ಗುಪ್ತಮಾರ್ಗದಿಂದ ಹೊರಟಳು. ಅವಳೊಡನೆ ಆಕೆಯ ಸ್ತ್ರೀಸೈನ್ಯವಿತ್ತು. ಜಗದಂಬೆಯ ದರ್ಶನ ಮಾಡಿ ತನ್ನ ಎಂಟು - ಹತ್ತು ಸರದಾರರೊಂದಿಗೆ ಹಿಂತಿರುಗುತ್ತಿದ್ದ ಶಿವಾಜಿಯನ್ನು ಸ್ತ್ರೀ ಸೈನಿಕರು ಸುತ್ತುವರೆದರು. ತನ್ನೆಡೆಗೆ ನುಗ್ಗಿ ಬಂದ ಸರದಾರರನ್ನು ಮಲ್ಲಮ್ಮ ಖಡ್ಗದಿಂದ ಹೊಡೆದು ನೆಲಕ್ಕುರುಳಿಸಿದಳು. ಈಗ ಮಲ್ಲಮ್ಮ ಖಡ್ಗ ಹಿಡಿದು

ಪುಟ 5ಕ್ಕೆ......

ಸಮುದಾಯ ಜೀವನದರ್ಶನದ ಅಪೂರ್ವಮಾದರಿ

- ಜ್ಯೋತ್ಸ್ನಾ ಕಾಮತ್

ಗಾಂಧಿ ಬಂದ (ಕಾದಂಬರಿ)
ಲೇಖಕಿ : ಎಚ್. ನಾಗವೇಣಿ
(ದ್ವಿತೀಯ ಮುದ್ರಣ : 2001ನೇ ವರ್ಷ)
ಲೋಹಿಯಾ ಪ್ರಕಾಶ ಬಳ್ಳಾರಿ
ಬೆಲೆ 130/- ರೂ.

ಮಹಿಳಾ ಸಾಹಿತ್ಯದ ಇತ್ತೀಚಿನ ವರ್ಷಗಳ ಹೆಗ್ಗಳಿಕೆಯೆಂದರೆ, ಈವರೆಗೆ ಓದುಗರಿಗೆ ಲಭಿಸದ ಬೇರೆ ಬೇರೆ ಜನ ಸಮೂಹಗಳ ದೈನಂದಿನ ಜೀವನದ ಹತ್ತು ಹಲವು ಒಳನೋಟಗಳನ್ನು ಕಾದಂಬರಿ ಚೌಕಟ್ಟಿನಲ್ಲಿ ಅಚ್ಚುಕಟ್ಟಾಗಿ ಹೆಣೆದು ಒದಗಿಸಿದ್ದು. ತಟ್ಟನೆ ನೆನಪಿಗೆ ಬರುವ ಕೃತಿಗಳಲ್ಲಿ ವೈದೇಹಿ ಅವರ 'ಅಸ್ಪೃಶ್ಯರು', ಸುನಂದಾ ಬೆಳಗಾಂವಕರ 'ನಾಸು', ಸಾರಾ ಅಬುಬಕ್ಕರ ಅವರ 'ಸುಳಿಯಲ್ಲಿ ಸಿಕ್ಕವರು', ವಸುಮತಿ ಉಡುಪ ಅವರ 'ಅನವರತ' ಮುಂತಾದವು. ಈ ಎಲ್ಲ ಬರಹಗಾತಿಯರು ತಾವು ಹುಟ್ಟಿ ಬೆಳೆದ ವ್ಯವಹರಿಸಿದ ಸಮೂಹದ ಪರಿಸರದ ಹಿನ್ನೆಲೆಯಲ್ಲಿ ಕಂಡುಂಡ, ಇಲ್ಲವೇ ಚಿರಪರಿಚಿತ ಅನುಭವಗಳನ್ನು, ಘಟನೆಗಳನ್ನು, ವ್ಯಕ್ತಿಗಳನ್ನು ಕಥೆಯ ಚೌಕಟ್ಟಿನಲ್ಲಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇತ್ತೀಚೆಗೆ ಹೊರಬಂದ ಎಚ್. ನಾಗವೇಣಿ ಅವರ 'ಗಾಂಧಿಬಂದ' ಇನ್ನೂ ಮುಂದುವರಿದು, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಜನಾಂಗಗಳ ನಿಕಟ ಜೀವನವನ್ನು ರೂಪಿಸುವ ಮೇರು ಕೃತಿಯಾಗಿ ಮೆರೆದಿದೆ. ಪ್ರಕಟವಾದ ಕೆಲವೇ ತಿಂಗಳಲ್ಲಿ ಮರುಮುದ್ರಣಕಂಡು ದಾಖಲೆ ನಿರ್ಮಿಸಿದೆ. ಗಾಂಧೀಜಿ ಕಣ್ಮರೆಯಾಗಿ ಐವತ್ನಾಲ್ಕು ವರ್ಷ ಕಳೆದ ಬಳಿಕ ಕಿರಿಯ ತಲೆ ಮಾರಿನ ಲೇಖಕಿಗೆ ಆತ ''ಮುಖ್ಯವಸ್ತು''ವಾಗಿ ಪರಿಣಮಿಸಿದ್ದು, ಆತನ ಬದುಕು ಹಾಗೂ ಸಾಧನೆಯ ಸಾಮಯಿಕತೆಯನ್ನು ಎತ್ತಿಹಿಡಿಯುತ್ತದೆ. ಜೊತೆಗೆ ಈ ಇಡೀ ಉಪಖಂಡದ ಮೇಲೆ ಆ ವ್ಯಕ್ತಿ, ಹಿಂದೊಮ್ಮೆ ಬೀರಿರಬಹುದಾದ ಪವಾಡಸದೃಶ ಮೋಡಿಯ ಪ್ರಭಾವವನ್ನು ಕನ್ನಡ ಜಿಲ್ಲೆಯ ಕ್ಯಾನ್‌ವಾಸ್ ಮೇಲೆ ಲೇಖಕಿಯು ಮೂಡಿಸಿದ ಕೌಶಲ್ಯವನ್ನೂ ಬಿಂಬಿಸುತ್ತದೆ.

ಕಳೆದ ಶತಮಾನದ 30ರ ದಶಕದಲ್ಲಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಗಾಂಧೀಜಿ ದೇಶದಾದ್ಯಂತ ಸಂಚಾರ ಕೈಕೊಂಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಗೆ ಮೂರುಬಾರಿ ಭೇಟಿಯಿತ್ತಿದ್ದರು. ಈ ಐತಿಹಾಸಿಕ ಹಿನ್ನೆಲೆಯಲ್ಲಿ ಸಾಂಕೃತಿಕ ರಾಜಕೀಯ, ಧಾರ್ಮಿಕ ಜೀವನದಲ್ಲಿ ಎದ್ದ ಅಲ್ಲೋಲಕಲ್ಲೋಲ ಮತ್ತು ಘಟಿಸಿರಬಹುದಾದ ಜನಜಾಗೃತಿಯ ಚಿತ್ರಣವನ್ನು ಲೇಖಕಿ ಸೊಗಸಾಗಿ ಕೊಡ ಮಾಡಿದ್ದಾರೆ. ಖಾದಿ, ಸ್ವದೇಶಿ, ವಿಧವಾವಿವಾಹ ಪ್ರೋತ್ಸಾಹ, ಜಾತಿಪದ್ಧತಿ ಖಂಡನೆಯಂತಹ ಕ್ರಾಂತಿಕಾರಿ ವಿಚಾರಗಳನ್ನು ಕಂಡು ಕೇಳಿ ಅರಿಯದ ನೆಲದಲ್ಲಿ ಎಬ್ಬಿಸಿದ ಗದ್ದಲವನ್ನು ಮನದಟ್ಟಾಗಿ ಚಿತ್ರಿಸಿದ್ದಾರೆ.

ಕಾದಂಬರಿಯ ಮೂಲವಸ್ತು, ಬ್ರಾಹ್ಮಣವಿಧವೆ ದ್ರೌಪದಿ ಹಾಗೂ ಬ್ಯಾರಿ ತರುಣ ಅದ್ರಾಮರ ಪ್ರಣಯ ಹಾಗೂ ವಿವಾಹವಾದರೂ, ಅದಕ್ಕೆ ಪೂರಕವಾಗಿ ಬರುವ ಉಪಕಥಾನಕಗಳೆಲ್ಲ ಜೀವಂತವಾಗಿ ಸೂತ್ರಬದ್ಧವಾಗಿ ಬರಲು ಲೇಖಕಿ ತುಂಬ ಶ್ರಮಿಸಿದ್ದಾರೆ.

ಶತಮಾನಗಳಿಂದ ಕಡಲು, ನದಿ, ಕೋಡಿ, ಹಳ್ಳ, ತಿಟ್ಟಂಗಳ ಪ್ರದೇಶದಲ್ಲಿ ಜೊತೆಜೊತೆಯಾಗಿ ಬಾಳಿದರೂ, ಇತರೆಡೆಗಳಂತೆಯೇ ಅಲ್ಲಿಯೂ ಬ್ರಾಹ್ಮಣ, ಅಬ್ರಾಹ್ಮಣ, ದಲಿತರಾದಿ ಪಂಗಡಗಳ ಜೀವನ ವೈಷಮ್ಯದ ಮೂಢನಂಬಿಕೆಗಳ, ಜೀನಾದರ್ಶನಗಳ ತಿಕ್ಕಾಟಗಳು ಲೆಕ್ಕವಿಲ್ಲದಷ್ಟು. ಅಂಥ ಹಲವಾರು ಇಣುಕು ನೋಟಗಳು ಈ ಕೃತಿಯಲ್ಲಿವೆ. ಬ್ರಾಹ್ಮಣ, ನೆಂಟ, ಬೆಸ್ತ, ಬ್ಯಾರಿ ಕೊರಮ, ಮುಗೇರ ಜನಾಂಗಗಳ ಬದುಕಿನ ಹೊಳಹುಗಳ, ಅವರ ಹಬ್ಬ ಹುಣ್ಣಿಮೆಗಳ, ಊಟ-ಉಡಿಗೆಗಳ, ಆಟ-ಕೂಟಗಳ, ನೋವು-ನಲಿವುಗಳ ಚಿತ್ರಣ ಈ ಕಾದಂಬರಿಯಲ್ಲಿದೆ. ಭೂತಾರಾಧನೆಯ ಆ ಬೀಡಿನಲ್ಲಿ ಪ್ರಚಲಿತವಿದ್ದ ವಿವಿಧ ಆಚರಣೆಗಳ ನೋಟಗಳನ್ನೂ ಲೇಖಕಿ ಕೊಡಮಾಡಿದ್ದಾರೆ.

ಕೆಲವೊಂದರ ಸೂಕ್ಷ್ಮಾತಿಸೂಕ್ಷ್ಮ ವರ್ಣನೆ ಓದಿದಾಗ ಅವಕ್ಕೆಲ್ಲ ಲೇಖಕಿ ಪ್ರತ್ಯಕ್ಷದರ್ಶಿ ಆಗಿದ್ದರೇ? ಅಥವಾ ಬುಡಕಟ್ಟು ಜನಾಂಗಗಳ ರೀತಿರಿವಾಜುಗಳ ಅತಿ ಆಳ ಅಭ್ಯಾಸ ಮಾಡಿದರೇ? ಎಂದು ಸಂದೇಹ ಬರುವಷ್ಟು ನೈಜವಾಗಿವೆ. ವೈವಿಧ್ಯಮಯವಾಗಿವೆ. ಏನಿದ್ದರೂ ಭರದಿಂದ ಬದಲಾಗುತ್ತಲಿರುವ ನಮ್ಮ ಗ್ರಾಮಸಮಾಜದ ರೀತಿ-ರಿವಾಜುಗಳನ್ನು ನಾಗವೇಣಿ, ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ, ಎನ್ನುವುದರಲ್ಲಿ ಅನುಮಾನವಿಲ್ಲ. ಮಾನವ ಸಹಜ ದೌರ್ಬಲ್ಯಗಳನ್ನು ವಿನೋದ ಪೂರ್ಣವಾಗಿ ಚಿತ್ರಿಸಿದ್ದು (ಉದಾಹರಣೆಗೆ ಪಾಲೆಮರದ ಕೆತ್ತೆಯನ್ನು ತರಲು ಜಾತಿಭೇದವಿಲ್ಲದೆ ಜನ, ಹುಟ್ಟುಡುಗೆಯಲ್ಲಿ ಕಗ್ಗತ್ತಲಿನಲ್ಲಿ ಸಾಗುವದು, ನಾಯಿಕರಿಯನ ಕಳ್ಳುಸೇವನೆ, ಇತ್ಯಾದಿ) ಕಾದಂಬರಿ ಯುದ್ದಕ್ಕೂ ಓದುಗರ ಆಸಕ್ತಿ ಕೆರಳಿಸುತ್ತದೆ.

ಲಘುವಿನೋದದೊಂದಿಗೆ ಕೌಟುಂಬಿಕ ಕ್ರೌರ್ಯದ ಹತ್ತಾರು ಮಾದರಿಗಳೂ ಸಹಜವಾಗಿ ಮೂಡಿ ಬಂದಿವೆ.

ಇಷ್ಟಾದರೂ ದಕ್ಷಿಣ ಕನ್ನಡೇತರ ಓದುಗರಿಗೆ ಈ ಕಾದಂಬರಿ ಓದುವಾಗ ಎದುರಿಸಬೇಕಾಗಿ ಬರುವ ಭಾಷೆಯ ಅಡಚಣೆಗಳ ಕುರಿತು ಹೇಳಲೇಬೇಕು. ತುಳುಮಿಶ್ರಿತ ಕನ್ನಡ ಎಲ್ಲರಿಗೂ ಪರಿಚಿತವಿಲ್ಲ. ಪನಿಕುಳ್ಳು, ಗೋಸ್ಮರಿ, ಪುಣಿಪು, ತಾರ, ತೂಟಾನ್‌ದಿಡ್ಡೆ, ಬೈತಡ್ ಮುಂತಾದ ಅಪರಿಚಿತ ಪದಗಳು ಪುಟ-ಪುಟಗಳಲ್ಲೂ ಬರುತ್ತಿದ್ದರೆ ಓದುಸರಾಗವಾಗಿ ಸಾಗುವುದಿಲ್ಲ. ಆಯಾ ನೆಲದಲ್ಲಿ ರೂಪಗೊಂಡ ಸಾಹಿತ್ಯ ಕೃತಿ ಪ್ರಾದೇಶಿಕ ಭಾಷೆಯ ಸೊಗಡನ್ನು ಮೈದಾಳಿ ನಿಲ್ಲಬೇಕಾದ್ದು ಅನಿವಾರ್ಯವಾದರೂ, ಸೃಜನಶೀಲತೆ ಉತ್ತಮ ಮಾದರಿಯಾದ ಕಾದಂಬರಿಯೊಂದನ್ನು ಇಡೀ ಕರ್ನಾಟಕದ ಓದುಗರು ಓದಿ ಸವಿಯುವಂತೆ ಆಗಬೇಕಾದರೆ ಭಾಷೆ ಅಡ್ಡಿಯಾಗಬಾರದು. ಸರಸರ ಎಂದು ಕಾದಂಬರಿಯನ್ನೂ ಓದಿ ಮುಗಿಸುವ ಆತುರವುಳ್ಳವರು ಪುಸ್ತಕವನ್ನು ಬದಿಗಿಟ್ಟು, ಕೋಶದಲ್ಲಿ ಆಯಾ ಪದಗಳ ಅರ್ಥವನ್ನು ಹುಡುಕುವ ಗೋಜಿಗೆ ಹೋಗುವುದಿಲ್ಲ. ಸಾಹಿತ್ಯಾಸಕ್ತರೂ, ಎಷ್ಟೋ ಶಬ್ದಗಳನ್ನು ಬಿಟ್ಟುಕೊಟ್ಟುಭಾಷೆಯ ಕಸುವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೆ ಕೈಬಿಡಬೇಕಾಗುತ್ತದೆ. (ಇಲ್ಲಿ ಬರುವ ಬಹಳಷ್ಟು ಪದಗಳು ಯಾವ ಕೋಶದಲ್ಲೂ ಸಿಗುವುದಿಲ್ಲ)

ಈ ಸಂದರ್ಭದಲ್ಲಿ ಕೊಡಬಹುದಾದ ಸಲಹೆಯೆಂದರೆ ಕಾದಂಬರಿಯ ಮೂರನೆಯ ಮುದ್ರಣದಲ್ಲಿ ತುಳುಗನ್ನಡ ಆಡುಭಾಷೆಯ ಶಬ್ದಗಳಿಗಾಗಿ Glossaryಯನ್ನು ಕೊಡುವುದು, ಇದರಿಂದ ಕೃತಿಯ ಮಣ್ಣಿನ ಹಾಗೂ ಮೀನಿನ ವಾಸನೆಯನ್ನು ಸರಿಯಾಗಿ ಅಘ್ರೈಸಬಹುದು. ಜೊತೆಗೆ ಈ ಕೃತಿಯ ವಿಶೇಷ ಕೊಡುಗೆಯಾದ ಸಮಾಜ. ಜೀವನದ ದಾಖಲಾತಿ, ಶಾಶ್ವತವಾಗಿ ಉಳಿಯುವಂತೆ ಆದೀತು!

ಮರಳಿ ಮಣ್ಣಿಗೆ, ಕುಡಿಯರ ಕೂಡು, ಮಲೆಗಳಲ್ಲಿ ಮದುಮಗಳು ಇಂಥ ಕೃತಿ, ಮಹಿಳೆಯರ ಲೇಖನಿಯಲ್ಲಿ ಎಂದಾದರೂ ಮೂಡಿಬಂದಿತೆ! ಎಂದು ಕನವರಿಸಿದ ದಿನಗಳಿದ್ದವು. 'ಗಾಂಧಿ ಬಂದ' ಕಾದಂಬರಿ, ಆ ಕನವರಿಕೆಯನ್ನು ಇಲ್ಲವಾಗಿಸಿದೆ. ಹೊಸ ಭರವಸೆ ಹುಟ್ಟಿಸಿದೆ. ಸಮುದಾಯ ಜೀವನದ ಸಮ್ಯಗ್‌ದರ್ಶನ ಮಾಡಿಸಿಕೊಟ್ಟ ಲೇಖಕಿ ಇಂಥ ಸಶಕ್ತ ಕೃತಿಗಳನ್ನು - ಇನ್ನೂ ಕೆಲವನ್ನು ರಚಿಸಬಲ್ಲರೆಂದು ನಿರೀಕ್ಷಿಸಬಹುದಾಗಿದೆ.

◆

ಪುಟ 3ರಿಂದ.......

ಶಿವಾಜಿಯ ಕಡೆಗೆ ನುಗ್ಗಿಬರಲು, ಶಿವಾಜಿಗೆ ಗಾಬರಿಯಾಗಿ ಆ ಕ್ಷಣ ಆಕೆ ಮನುಷ್ಯಳಲ್ಲ, ಜಗದಂಬೆಯ ರೂಪವಾಗಿ ಆತನಿಗೆ ಅನಿಸಿತ್ತು. ಸೈನ್ಯದೊಂದಿಗೆ ತಯಾರಾಗಿ ಬಂದ ಆಕೆಯನ್ನು ಎದುರಿಸಿದರೆ ಉಳಿಯುವುದಿಲ್ಲ ಎನಿಸಿರಬೇಕು, ಕುದುರೆಯಿಂದ ಕೆಳಗಿಳಿದು ಕೈಜೋಡಿಸಿ ಶಿವಾಜಿಯ ಮಲ್ಲಮ್ಮನ ಕ್ಷಮೆ ಯಾಚಿಸಿದನು. 'ದುಷ್ಟಾ, ನನ್ನ ಪತಿಯ ಪ್ರಾಣವನ್ನು ತೆಗೆದುಕೊಂಡು ಕ್ಷಮೆ ಕೇಳುತ್ತಿರುವೆಯಾ' ಎಂದು ಮಲ್ಲಮ್ಮ ಗುಡುಗಿದಾಗ, ಶಿವಾಜಿ ರಾಣಿಗೆ ಸಾಷ್ಟಾಂಗ ನಮಸ್ಕಾರ ಮಾಡಿ 'ತಾಯಿ ನಿಮ್ಮ ಪತಿಯನ್ನು ಸೆರೆಹಿಡಿದು ತರಲು ಮಾತ್ರ ಹೇಳಿದ್ದೆ. ದುಷ್ಟಸರದಾರನೊಬ್ಬನು ಅವರನ್ನು ಕೊಂದನು, ಆ ತಕ್ಷಣವೇ ಆ ಸರದಾರನನ್ನು ಶಿಕ್ಷಿಸಿದ್ದೇನೆ' ಎಂದು ವಿವರಿಸಿ ಕ್ಷಮೆ ಬೇಡಿದನು. ಮಲ್ಲಮ್ಮ ಶಿವಾಜಿಯನ್ನು ಕ್ಷಮಿಸಿ 'ಮಹಾರಾಜ ನನ್ನ ಕೋಟೆಗೆ ಮುತ್ತಿಗೆ ಹಾಕಿರುವ ನಿನ್ನ ಸೈನ್ಯವನ್ನು ಹಿಂದಕ್ಕೆ ತೆಗೆದುಕೋ. ಆಮೇಲೆ ರಾಜಿ ಮಾಡಿಕೊಳ್ಳೋಣ' ಎಂದು ಹೇಳಿದಳು.

ಬೆಳವಡಿಗೆ ಹಿಂತಿರುಗಿದ ರಾಣಿ ಯುದ್ಧ ನಿಲ್ಲಿಸಲು ಪ್ರಯತ್ನಿಸಿದಳು. ಆದರೆ ಯುದ್ಧ ಬಹಳ ಜೋರಾಗಿ ನಡೆಯುತ್ತಿದ್ದು, ಅದನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಮಲ್ಲಮ್ಮ ಯುದ್ಧ ಭೂಮಿಗೆ ಬರುತ್ತಿದ್ದಂತೆ ಮರಾಠಾ ಸೈನಿಕರು ನಾಲ್ಕೂ ಕಡೆಯಿಂದಲೂ ಸುತ್ತು ಗಟ್ಟಿ ಜೋರಾಗಿ ಯುದ್ಧ ಮಾಡಲು ಶುರುಮಾಡಿದರು. ರಾಣಿ ಕತ್ತಿ, ಭಲ್ಲೆಗಳನ್ನು ಉಪಯೋಗಿಸಿ ಹೋರಾಡಿದಳು. ಆಕೆಯ ಕೈಚಳಕ, ಯುದ್ಧ ಕುಶಲತೆ ಮರಾಠರನ್ನು ಬೆರಗು ಗೊಳಿಸಿತು. ಅಷ್ಟರಲ್ಲಿ ಶಿವಾಜಿಯಿಂದ ಯುದ್ಧ ನಿಲ್ಲಿಸಲು ಆದೇಶ ಬಂದಿತು. ರಾಣಿ ಮಲ್ಲಮ್ಮ ಮತ್ತು ಶಿವಾಜಿ ಸಂಧಿ ಮಾಡಿಕೊಂಡರು.

ನಂತರದ ದಿನಗಳಲ್ಲಿ ಶಿವಾಜಿಯ ಸೊಸೆ ತಾರಾಬಾಯಿ ಮತ್ತು ಮಲ್ಲಮ್ಮಾಜಿ ಇವರಿಬ್ಬರ ಪರಸ್ಪರ ಪರಿಚಯ ಮತ್ತು ಸ್ನೇಹ ಸಂಬಂಧ ಬೆಳೆಯಿತು. ಬೆಳವಡಿ ಮಲ್ಲಮ್ಮನ ಶೌರ್ಯ ಸಾಹಸದಿಂದ ಪ್ರಭಾವಿತಳಾಗಿ ಶಿವಾಜಿಯ ಸೊಸೆ ತಾರಾಬಾಯಿ, ಆಕೆಯ ಕತೆಯನ್ನು ಮರಾಠಿಯಲ್ಲಿ ಬರೆಯಿಸಿದಳು. ಬೆಳವಡಿ ಮಲ್ಲಮ್ಮನ ಧೈರ್ಯ ಸಾಹಸ ಇತಿಹಾಸದ ಪುಟಗಳಲ್ಲಿ ದಾಖಲಾಗುವಂತೆ ಮಾಡಿದಳು.

◆

ಮುಂಬಯಿಯ 'ಮರ್ಯಾದಾ ಹತ್ಯೆ' - ಕಡೆಗೂ ದೊರೆತ ನ್ಯಾಯ

ಕಳೆದ ಎರಡು ಮೂರು ವರ್ಷಗಳಲ್ಲಿ, ಪಾಕಿಸ್ತಾನದಲ್ಲಿ ಸಾವಿರಾರು ಮಹಿಳೆಯರು ತಮ್ಮ ಗಂಡ, ತಂದೆ, ಇಲ್ಲ ಸೋದರಿಯರಿಂದಲೇ ಹತ್ಯೆಗೀಡಾದ ಪ್ರಕರಣಗಳು ಬೆಳಕಿಗೆ ಬಂದವು. ಹತ್ಯೆಗೆ ಕಾರಣ ಅವರು ತಮ್ಮ ಇಷ್ಟದ ಹುಡುಗನನ್ನು ಆಯ್ದುಕೊಂಡದ್ದಾಗಿತ್ತು, ಇಲ್ಲ 'ತಾವು ಮದುವೆ ಮಾಡಿ ಕಳುಹಿಸಿದ ಮಗಳು, ವಿಚ್ಛೇದನ ಬಯಸಿ ಮನೆಗೆ ಕಳಂಕ ತಂದಳು' ಎಂಬ ನೆಪವಾಗಿತ್ತು. ಕುಟುಂಬದ ಗೌರವದ ಹೆಸರಿನಲ್ಲಿ ಪುರುಷರು ಹೆಂಗಸರ ಮೇಲೆ ಎಸಗುವ ಇಂಥಾ ಪೈಶಾಚಿಕ ಕೃತ್ಯ 'ಮರ್ಯಾದಾ ಹತ್ಯೆ' ಎಂದೇ ಕುಪ್ರಸಿದ್ಧವಾಯಿತು. ಮರ್ಯಾದಾ ಹತ್ಯೆಗಳು ಪಾಕಿಸ್ತಾನಕ್ಕೆ ಸೀಮಿತ ಎಂದೇನಾದರೂ ನಾವು ಭಾವಿಸಿದ್ದರೆ, ಅದು ಶುದ್ಧ ತಪ್ಪು. ಮುಂಬಯಿಯ ರಾಜವಿಂದರ್ ಕೌರ್ ಕೇಸು ಮೈನಡುಗಿಸುತ್ತದೆ.

ರಾಜವಿಂದರ್ ಇಪತ್ತಾರು ವರ್ಷದ ಶಾಲಾ ಪ್ರಾಧ್ಯಾಪಕಿ. ಈಕೆ ತನ್ನ ಇಚ್ಛೆಯಂತೆ ಹರ್ವಿಂದರ್ ಸಿಂಗ್ ಮಥಾರು ಎಂಬ ಹುಡುಗನನ್ನು ಪ್ರೀತಿಸಿ ವಿವಾಹವಾದಳು. ಕೌರ್ ಕುಟುಂಬ 'ರಂಧವಾ' ಎಂಬ 'ಮೇಲ್ಜಾತಿ'ಗೆ ಸೇರಿದೆ. ಮಗಳು 'ಮಥಾರು' ಎಂಬ 'ಕೀಳು ಜಾತಿ'ಯ ಹುಡುಗನನ್ನು ಮದುವೆಯಾದಳು ಎಂಬುದು ಈಕೆಯ ಕುಟುಂಬದ ವರ್ಗದವರಿಗೆ ಎಷ್ಟು ಅಸಹನೀಯವಾಗಿ ಆಕ್ರೋಶ ಹುಟ್ಟಿಸಿತು ಎಂದರೆ, ಅವರು ಕೊಲೆಗೂ ಹೇಸಲಿಲ್ಲ. ಜಾತಿ ಬಿಟ್ಟು ಮಗಳು ಮದುವೆಯಾದಳು ಎಂಬ ಕಾರಣಕ್ಕೆ ಆಕೆಯ ತಂದೆ, ತಾಯಿ, ಅಣ್ಣಂದಿರು, ಸೋದರತ್ತೆ, ಸೋದರಮಾವಂದಿರು ಒಟ್ಟಿಗೆ ಸೇರಿ, ರಾಜವಿಂದರ್ ಕೌರಳ ಗಂಡ, ಅತ್ತೆ, ಮಾವ, ಗಂಡನ ಅಣ್ಣ, ಆತನ ಹೆಂಡತಿ ಎಲ್ಲರನ್ನೂ ಒಟ್ಟಿಗೇ ಕೊಲೆ ಮಾಡಿ ಮುಗಿಸಿದರು. ಮಗಳನ್ನೂ ಕೊಲ್ಲುವ ಅವರ ಯತ್ನ ಅಸಫಲವಾಗಿ, ರಾಜವಿಂದರ್ ಕೌರ್ ಬಾಲ್ಕನಿಯಿಂದ ಹೊರಗೆ ಎತ್ತೆಸಯಲ್ಪಟ್ಟು, ಪಕ್ಕದ ಮನೆಗೆ ತೆವಳಿ ಹೋಗಿ ಸಹಾಯ ಬೇಡಿದಳು. ಮೇ 30, 1999ರ ಆ ದಿನ ಮಗಳ ಇಡೀ ಕುಟುಂಬವನ್ನು ನಿರ್ನಾಮ ಮಾಡಿದರು.

ಇದು ನಡೆದದ್ದು ಎಲ್ಲಿಯೋ ಬಿಹಾರ್, ಉತ್ತರ ಪ್ರದೇಶದ ಮೂಲೆಯಲ್ಲಲ್ಲ, ಮುಂಬಿಯಿಯ ಬಳಿಯ ಪನ್ವೆಲ್‌ನಲ್ಲಿ. ವಿದ್ಯಾವಂತ ಕುಟುಂಬಗಳಲ್ಲೂ ಎಂತಹ ಅಸಹನೆ ಕುದಿಯಬಲ್ಲದು, ಇಡೀ ಕುಟುಂಬ ಒಟ್ಟುಗೂಡಿ, ಮಗಳ ಇಡೀ ಕುಟುಂಬವನ್ನು ಕೊಲೆ ಮಾಡಬಲ್ಲದು ಎಂಬ ಈ ಪ್ರಕರಣ ಎದೆ ನಡುಗಿಸಿತು. ರಾಜವಿಂದರ್ ಕೌರ್ ಎದುರಿಸಿದ ದುರಂತ ಊಹಿಸಲುಸಾಧ್ಯವಿಲ್ಲದ್ದು. ಒಂದು ಕಡೆ ತನ್ನ ತಂದೆ ತಾಯಿ ಅಣ್ಣಂದಿರು ಕೊಲೆಗಾರರು, ಇನ್ನೊಂದು ಕಡೆ ತಾನು ಪ್ರೀತಿಸಿ ವಿವಾಹವಾದ ಗಂಡ, ಇಡೀ ಕುಟುಂಬ ಕೊಲೆಯಾಗಿದೆ. ಇಂತಹ ಉಭಯಸಂಕಟದ ಪರಿಸ್ಥಿತಿಯಲ್ಲೂ ವಿಚಲಿತವಾಗದೆ ನ್ಯಾಯಕ್ಕಾಗಿ ಹೋರಾಡಿ ನಿಂತ ಕಾರ್‌ಗೆ, ಕಡೆಗೂ ಈ ಡಿಸೆಂಬರ್ ತಿಂಗಳಿನಲ್ಲಿ ನ್ಯಾಯ ಸಿಕ್ಕಿತು. ನ್ಯಾಯಾಲಯ ಆಕೆಯ ಕುಟುಂಬದ ಆರು ಮಂದಿಯನ್ನು ಅಪರಾಧಿಗಳೆಂದು ಸಾರಿ, ಅವರಲ್ಲಿ ನಾಲ್ವರಿಗೆ ನೇಣು ಶಿಕ್ಷೆ ವಿಧಿಸಿದೆ. ರಾಜವಿಂದರ್ ಇಂತಹ ಭಯಂಕರ ಪ್ರಕರಣದ ಸಾಕ್ಷಿಯಾಗಿ 'ಮರ್ಯಾದಾ ಹತ್ಯೆ'ಗೆ ಬಲಿಯಾದವಳಾಗಿ, ಮೊಕದ್ದಮೆಯುದ್ದಕ್ಕೂ ಧೈರ್ಯವಾಗಿ ನಿಂತು ಹೋರಾಡಿದಳು. ವಿಚಾರಣೆಯ ಪಾಟಿ ಸವಾಲನ್ನು ಅತ್ಯಂತ ತಾಳ್ಮೆ, ದಿಟ್ಟತನದಿಂದ ಎದುರಿಸಿದಳು. ಕೋರ್ಟ್ ಕೂಡಾ ಆಕೆಯ ಅಗಾಧ ಆತ್ಮನಿಗ್ರಹ, ಸಹನೆಯನ್ನು ಕಂಡು ಪ್ರಭಾವಿತವಾಗಿ 'ಆಕೆಯ ಸಾಕ್ಷಿ' ಪುರಾವೆ ಸುಸಂಗತವಾಗಿದೆ, ತೃಪ್ತಿಕರವಾಗಿ, ನಂಬುವಂತಿದೆ, ಪ್ರಾಮಾಣಿಕವಾಗಿ ತೋರುತ್ತದೆ' ಎಂದು ಉದ್ಗರಿಸಿತು. 'ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ' ಈಕೆಯ ಈ ಹೋರಾಟಕ್ಕೆ ಬೆಂಬಲ ನೀಡಿತು. ತನ್ನದೇ ಕುಟುಂಬದ ವಿರುದ್ಧ ಸಾಕ್ಷಿ ನುಡಿಯಬೇಕಾದರೂ, ರಾಜವಿಂದರ್ ಅಳುಕದೆ ನಿಂತಿದ್ದಳು. ಪೋಲೀಸರಿಂದ ಆಕೆಗೆ ಯಾವ ಸಹಾಯವೂ ಆಗಿರಲಿಲ್ಲ. ಎಫ್.ಐ.ಆರ್. ಕೂಡಾ ಸರಿಯಾಗಿ ದಾಖಲಾಗಿರಲಿಲ್ಲ.

ಮೂರು ವರ್ಷಗಳ ಈ ಮೊಕದ್ದಮೆಯ ಅವಧಿಯಲ್ಲಿ ರಾಜವಿಂದರ್ ಜೀವಕ್ಕೆ ಎಲ್ಲಿಲ್ಲದ ಆಪತ್ತಿತ್ತು. ಆಕೆಯ ಇರುವು ತಿಳಿಯದಂತೆ, ಗುಪ್ತವಾಗಿ ಕೌರ್‌ಳನ್ನು ಕಾದಿರಿಸಿ, ಆಕೆಯ ಸುರಕ್ಷಣೆಯ ಹೊರೆ ಹೊತ್ತು ಸಂಘಟನೆ ಸಹಾಯ ನೀಡಿತು. ಆಕೆಯ ಈ ಹೋರಾಟದಲ್ಲಿ ಸಿಕ್ ಸಮುದಾಯದ ಅನೇಕರು ಸಹಾಯಕ್ಕೆ ಬಂದರು. ಆಕೆಯ ಪರಿಚಯವೇ ಇಲ್ಲದಿದ್ದರೂ, ಕೊಲೆಯಾದ ನಂತರದ ಆ ದಿನಗಳಲ್ಲಿ ಸ್ಥಳೀಯ ಸಿಕ್ ಕುಟುಂಬವೊಂದು ಆಕೆಗೆ ಆಶ್ರಯ ನೀಡಿತು. ಈ ಕೇಸಿನಲ್ಲಿ ಸೆಳೆಯಲ್ಪಟ್ಟ ನೆರೆಯ ಮನೆಯವರೂ ಕೇಸಿಗೆ ಸಾಕ್ಷಿಗಳಾಗಿ ನಿಂತು, ಮುಂದೆ ಬಂದರು. ನ್ಯಾಯವಾದಿಗಳಾದ ಸುನಿಲ್ ನಾಯಕ್ ಮತ್ತು ಮಿಲಿಂದ್ ಸಹಸ್ರಬುದ್ದೇ ಹಣ ತೆಗೆದುಕೊಳ್ಳದೇ, ಕೌರ ಪರವಾಗಿ ನಿಂತು ಕೆಲಸ ಮಾಡಿದರು. ನ್ಯಾಯಕ್ಕಾಗಿ ಮಹಿಳೆಯರು ದಶಕ ದಶಕಗಳೇ ಕಾದ ಪ್ರಕರಣಗಳಿರುವಾಗ, ಕೌರ್‌ಗೆ ಮೂರು ವರ್ಷಗಳ ಅಂಚಿನಲ್ಲಿ ನ್ಯಾಯ ದೊರೆಯಿತು ಎಂದು ಸಮಾಧಾನ ಪಟ್ಟುಕೊಳ್ಳಬಹುದು. ಆದರೆ ಇಂತಹ ಬೀಭತ್ಸ ಹತ್ಯೆಗಳನ್ನು ತಡೆಯುವುದು ಹೇಗೆ? ಇಪತ್ತೊಂದನೆ ಶತಮಾನಕ್ಕೆ ಅಡಿಯಿಟ್ಟ ಈ ಕಾಲದಲ್ಲೂ, ಮುಂಬಯಿಯಂತಹ ಮುಂದುವರೆದ ನಗರಗಳಲ್ಲಿ, ವಿದ್ಯಾವಂತ ಕುಟುಂಬಗಳಲ್ಲಿ ಇಂತಹ ವಿಪರೀತದ ಪ್ರಕರಣಗಳು ನಡೆಯಬಲ್ಲವು ಎಂದರೆ ಇದು ನಾಗರಿಕ ಸಮಾಜಕ್ಕೇ ದೊಡ್ಡ ಕಳಂಕ. ಹೆಣ್ಣು ಮಕ್ಕಳು 'ತಾವು ಹೇಳಿದಂತೆ ಕೇಳಬೇಕು' ಎಂಬ ಹಕ್ಕಿನ ಅಹಂಕಾರ, 'ತಮ್ಮ ಮಾತು ಮೀರಿ ನಡೆದಳು' ಎಂಬ ಕೋಪ ಇಡೀ ಕುಟುಂಬದ ಕೊಲೆಗೆ ಕೆರಳಿಸಬಲ್ಲದು ಎಂದರೆ, ಮಹಿಳೆಯನ್ನು ಕುರಿತಂತೆ ನಮ್ಮ ಸಮಾಜದ ಪೂರ್ವಗ್ರಹಗಳು ಎಷ್ಟು ಆಳವಾಗಿ ಬೇರು ಬಿಟ್ಟಿವೆ ಎಂದು ಊಹಿಸಬಹುದು. ಇದು ಕೇವಲ ಮಹಿಳಾ ಸಮಸ್ಯೆಯಲ್ಲ, ರೋಗಗ್ರಸ್ಥ ಸಮಾಜದ ಒಟ್ಟು ಸಮಸ್ಯೆ. ಇಂತಹ ರೋಗ ಸಾಂಕ್ರಾಮಿಕವಾಗುವ ಮೊದಲು ತಡೆಗಟ್ಟುವ ಮಾರ್ಗಗಳನ್ನು ಹುಡುಕಬೇಕಿದೆ.

\- ಎನ್ಸಿ

ಸ್ವಸಹಾಯ ಗುಂಪುಗಳು

- ಹೆಚ್. ಎನ್. ಗೀತಾ

ಅವರೆಲ್ಲಿ ಸೇರಿ ಒಂದು 15 ಮಹಿಳೆಯರಿರಬಹುದು. ಅವರಿಗೆ ಅರ್ಧ ಎಕರೆ ಜಮೀನಿದೆ. ಅದರ ನಿರ್ವಹಣೆ ಅವರದೇ. ಅದರಲ್ಲಿ ಬಾಳೆಹಣ್ಣು ಬೆಳೆಯುತ್ತಾರೆ; ಶುಂಠಿ ಬೆಳೆಯುತ್ತಾರೆ. ಕೇವಲ ಕೃಷಿಗೆ ಸಂಬಂಧಿಸಿದ ಕೆಲಸ ಮಾತ್ರವಲ್ಲ, ಸಾಬೂನು ಛತ್ರಿಗಳನ್ನು ತಯಾರಿಸುತ್ತಾರೆ. ತಮ್ಮ ಅನುಕೂಲಕ್ಕೆ ತಕ್ಕ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ ಎನ್ನಬೇಡಿ. ಇವರಿಗೆ ನಾಗರಿಕ ಕ್ಷೇಮಾಭಿವೃದ್ಧಿಯ ಹೊಣೆಯೂ ಗೊತ್ತು. ಅದನ್ನು ನಿಭಾಯಿಸುವ ರೀತಿ-ನೀತಿಗಳೂ ಗೊತ್ತು.

ಇದು ನಗರ ಪ್ರದೇಶಗಳವರ ಸೈಡ್ ಬಿಸಿನೆಸ್ ಅಲ್ಲ. ಕೇರಳ-ಕರ್ನಾಟಕ-ಆಂಧ್ರಗಳ ಕೆಲವು ಗ್ರಾಮೀಣ ಪ್ರದೇಶಗಳ ಮಹಿಳೆಯರು ತೋರುತ್ತಿರುವ ಪ್ರಗತಿಯ ಚಿತ್ರಣವಿದು. ಇಂತಹ ಪ್ರಗತಿಯನ್ನು ಒಂಟಿಯಾಗಿ ಸಾಧಿಸುವುದೇನೋ ಸ್ವಲ್ಪ ಕಷ್ಟವೇ. ಇದನ್ನು ಅರಿತ ಈ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ಮುಂದುವರಿಯುತ್ತಿದ್ದಾರೆ. ಇಡೀ ಕೇರಳದಲ್ಲೇ 5500 ಹೆಚ್ಚು ಸಂಖ್ಯೆಯಲ್ಲಿ ಇಂತಹ ಸ್ವಸಹಾಯ ಗುಂಪುಗಳಿವೆ. ಗುಂಪುಗಳಲ್ಲಿ ಸದಸ್ಯರ ಪ್ರಮಾಣದಲ್ಲಿ ಹೆಚ್ಚು-ಕಮ್ಮಿ ಇರುತ್ತದೆ. ಸ್ವಸಹಾಯ ಗುಂಪುಗಳು ಮಹಿಳೆಯರದು ಮಾತ್ರವಲ್ಲ, ಪುರುಷರದೂ ಇವೆ. ಅದು ಬೇರೆ ವಿಷಯ.

ಈ ಸ್ವಸಹಾಯ ಗುಂಪುಗಳು ಮಹಿಳೆಯರಿಗೆ ಸ್ವಾವಲಂಬಿಗಳಾಗಲು ಒತ್ತಾಸೆ ನೀಡುತ್ತವೆ. ಮೇರಿಯ ವಿಷಯವನ್ನೇ ತೆಗೆದುಕೊಳ್ಳಿ. ಮಾಮೂಲಿನಂತೆ ಮನೆಗೆಲಸ, ಅದರ ಮೇಲೆ ಗಂಡನ ಹಾಲಿನ ಡೈರಿಯ ನಿರ್ವಹಣೆ ಇಷ್ಟನ್ನು ಸಂಭಾಳಿಸುವುದರಲ್ಲೇ ಆಕೆಗೆ ಸಾಕಾಗಿ ಹೋಗುತ್ತಿತ್ತು. ಆದರೂ ಏನೋ ಅತೃಪ್ತಿ. ಆದರೆ ಸ್ವಸಹಾಯ ಗುಂಪಿಗೆ ಸೇರಿದ ಮೇಲೆ ಅವಳ ಮನೋಭಾವವೇ ಬದಲಾಯಿತು. ಎಷ್ಟರಮಟ್ಟಿಗೆ ಗೊತ್ತೆ? ಈಗ ಆಕೆ ಉದಂಪಂಚೋಲ ತಾಲ್ಲೂಕಿನ ಆಯ್ದ ಪ್ರತಿನಿಧಿ. ಸ್ಥಳೀಯ ಸಹಕಾರಿ ಬ್ಯಾಂಕಿನ ಸಮಿತಿಯ ಸದಸ್ಯೆ. ತನ್ನ ಮನೆಯಾಚೆಗೂ ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದೆಂಬ ಕಲ್ಪನೆಯೇ ಅವಳಿಗಿರಲಿಲ್ಲ. ತನ್ನ ಬದಲಾದ ವ್ಯಕ್ತಿತ್ವಕ್ಕೆ ಸ್ವಸಹಾಯ ಗುಂಪೇ ಕಾರಣ ಎನ್ನುತ್ತಾಳೆ ಮೇರಿ.

ಮೇರಿ ಏನೋ 'ಗೃಹಿಣಿ' ಎಂಬ ಪಟ್ಟದಲ್ಲಿ ತನ್ನನ್ನು ತಾನೇ ಮನೆಗೆ ಸೀಮಿತಗೊಳಿಸಿಕೊಂಡಿದ್ದಳು. ಆದರೆ ಕಾಲೇಜಿಗೆ ಹೋಗಿಯೂ ತಮ್ಮ ಪರಧಿಯನ್ನು ಸಂಕುಚಿತಗೊಳಿಸಿಕೊಂಡವರೂ ಇರುತ್ತಾರೆ. ಬಿಂದು ಅದಕ್ಕೆ ಒಂದು ಉದಾಹರಣೆ : ಕಾಮರ್ಸ್ ಕಲಿತಾಕೆ ಅವಳು. ಆದರೇನು ಮನೆ ಮನೆಗೆಲಸ! ಇಷ್ಟೇ ಅವಳ ಪ್ರಪಂಚವಾಗಿತ್ತು. ಅವಳೂ ಸ್ವಸಹಾಯ ಗುಂಪಿನ ಸದಸ್ಯೆ ಆಗುವವರೆಗೆ. ಅಲ್ಲಿಂದ ಆರಂಭವಾಯಿತು ವ್ಯಕ್ತಿತ್ವ ವಿಕಸನ. ಇದು ಕೇವಲ ಸಿಂಧು-ಬಿಂದುಗಳ ಕತೆಯಲ್ಲ. ಸಂಘ ಸೇರಿದ ಎಲ್ಲ ಮಹಿಳೆಯರ ಕತೆ. ಇವರು ತಮ್ಮ ಚಟುವಟಿಕೆಗಳ ಮೂಲಕ ಪರಸ್ಪರ ನೆರವಾಗುತ್ತಾರೆ. ಸ್ವಲ್ಪ ಹಣವನ್ನೂ ಸಂಪಾದಿಸುತ್ತಾರೆ. ಸಮಾಜಸೇವೆ ಮಾಡುತ್ತಾರೆ. ಹೊಸ ಹೊಸತನ್ನೂ (ಉದಾ : ಕಂಪ್ಯೂಟರ್ ಶಿಕ್ಷಣ) ಅಲಿಯುತ್ತಾರೆ.

ಕೇರಳದ ಇಂತಹ ಸ್ವಸಹಾಯ ಗುಂಪುಗಳ ಪೈಕಿ 'ಐಶ್ವರ್ಯ' ಬಹಳ ಯಶಸ್ವಿ ಅನ್ನಿಸಿಕೊಂಡಿದೆ. ಈ ಸಂಘ ಇಡುಕ್ಕಿ ಜಿಲ್ಲೆಯ ಮಿಷನ್ ಆಸ್ಪತ್ರೆಯಲ್ಲಿ ಕ್ಯಾಂಟೀನ್ ನಡೆಸುತ್ತಿದೆ. ಆರಂಭದಲ್ಲಿ ಈ ಯೋಜನೆಗೆ ಒಂದು ಎನ್.ಜಿ.ಓ. ನೆರವು ಇತ್ತು. ಮಾರ್ಗದರ್ಶನವಿತ್ತು. ಆದರೆ ಈಗ ಮಹಿಳೆಯರೇ ಅದನ್ನು ಸ್ವತಂತ್ರವಾಗಿ ನಡೆಸಬಲ್ಲರು. ದಿನಕ್ಕೆ ಏನಿಲ್ಲೆಂದರೂ 1000ರೂಗಳ ವ್ಯವಹಾರವಿದೆ.

ಸ್ವಸಹಾಯ ಗುಂಪುಗಳ ಮತ್ತೊಂದು ಆಕರ್ಷಕ ಹಾಗೂ ಪ್ರಯೋಜನಕಾರೀ ಯೋಜನೆಯೆಂದರೆ ಅವರದೇ ಆದ 'ಬ್ಯಾಂಕ್' ಅಥವಾ 'ಚೀಟಿ' ಪದ್ಧತಿ. ವಾರಕ್ಕೆ ಕನಿಷ್ಠವೆಂದರೆ 10ರೂ ಕೊಡಬೇಕು. 58 ವಾರಗಳ ಬಳಿಕ ಹಾಕಿದ ಹಣ ಬಡ್ಡಿ ಬರುತ್ತದೆ. 100ರೂ ಹಾಕಿದರೆ 6400ರೂ ಕೈಗೆ ಬರುತ್ತದೆ. ಸಾಕಲ್ಲವೆ. ಹಸುವೋ, ಮಿಕ್ಸಿಯೋ, ಏನೋ ಒಂದು ಖರೀದಿಸಲು!?

ಸ್ವಸಹಾಯ ಗುಂಪುಗಳ ಚಟುವಟಿಕೆಗಳು ಕಾನೂನಿನ ಚೌಕಟ್ಟಿನೊಳಗೆ ಬರುವುದಿಲ್ಲ. ಮೇಲೆ ಬರಬೇಕೆನ್ನುವ ಅದನ್ನು ಹಂಬಲದಿಂದ, ಛಲದಿಂದ, ಪರಸ್ಪರ ವಿಶ್ವಾಸ ನಂಬಿಕೆಗಳಿಂದ ಇವು ರೂಪುಗೊಳ್ಳುತ್ತವೆ. ನಿಯಮ-ನಿಬಂಧನೆಗಳನ್ನು ಬರೆದು-ಓದದೆಯೇ ಒಂದು ಶಿಸ್ತು ರೂಢಿಸಿಕೊಳ್ಳುತ್ತಾರೆ. ಆದರೆ ಆಯಾವಾರದ ಚಟುವಟಿಕೆಗಳನ್ನು ಗುಂಪಿನ ಸಂಚಾಲಕರಿಗೆ ವರದಿ ಮಾಡುತ್ತಾರೆ.

ಸ್ವಸಹಾಯ ಗುಂಪುಗಳು ಗ್ರಾಮೀಣ ಮಹಿಳೆಯರ ಸ್ವಅಭಿವೃದ್ಧಿಗೆ ನಿಜಕ್ಕೂ ಸಹಾಯಕವಾಗಿವೆ.

ಕೇರಳದಲ್ಲೊಂದು ಆದಿವಾಸಿ ಭೂಹೋರಾಟ

- ಕೆ. ಎಸ್. ಶ್ರೀಲತಾ

ಕೇರಳ ರಾಜ್ಯ ಸರಕಾರ ಕೊನೆಗೂ ಆದಿವಾಸಿ, ದಲಿತ ಸಮರ ಸಮಿತಿಯೆದುರು ತಲೆಬಾಗಲೇಬೇಕಾಯಿತು. ಆಗಸ್ಟ್ 30ರಿಂದ 48 ದಿನಗಳ ಕಾಲ ಕೇರಳದ ಆದಿವಾಸಿಗಳು ಆದಿವಾಸಿ, ದಲಿತ ಸಮರ ಸಮಿತಿಯ ಆಶ್ರಯದಲ್ಲಿ ಭೂಮಿಗಾಗಿ ಹೋರಾಟ ನಡೆಸಿದರು. ಈ ಹೋರಾಟವು ರಾಜ್ಯದ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಹೊಸದೊಂದು ಶೈಲಿಗಲ್ಲಾಗಿ ಇತಿಹಾಸ ಸೃಷ್ಟಿಸಿದೆ. ಧಾರ್ಮಿಕ, ಸಾಂಸ್ಕೃತಿಕ ಹೋರಾಟ, ನಕ್ಸಲೀಯರು, ಮಾರ್ಕ್ಸ್‌ವಾದಿಗಳು, ಬಲಪಂಥೀಯ, ಇವರೆಲ್ಲರ ಹೋರಾಟವನ್ನು ಕಂಡು ಅನುಭವಿಸಿದ ಕೇರಳ ರಾಜ್ಯ ಈ ಬಾರಿ ಎಲ್ಲಾ ಮಾದರಿಗಿಂತಲೂ ವಿಭಿನ್ನವಾದ ಹೋರಾಟವನ್ನು ಆದಿವಾಸಿಗಳಿಂದ ಅನುಭವಿಸಿತು. ಇವರು ಅಳವಡಿಸಿದ ವಿಶಿಷ್ಟ ಹೋರಾಟ ವಿಧಾನವು 'ಜಾನು ಮಾಡೆಲ್ ಸಮರಂ' (ಜಾನು ಮಾದರಿ ಹೋರಾಟ) ಎಂಬ ಖ್ಯಾತಿ ಗಳಿಸಿತು.

ಆಗಸ್ಟ್ 30ರಂದು ರಾಜ್ಯದ ವಿವಿಧೆಡೆಗಳಿಂದ ಹೊರಟು ಬಂದ ಆದಿವಾಸಿಗಳು ಮುಖ್ಯಮಂತ್ರಿಯ ನಿವಾಸದೆದುರು ಎಬ್ಬಿಸಿದ ಗುಡಿಸಲು 'ಆದಿವಾಸಿ ನಿರಾಶ್ರಿತರ ಶಿಬಿರ'ವಾಗಿ ಪ್ರತಿಭಟನೆಗೆ ನಾಂದಿ ಹಾಡಿತು. ಪ್ರತಿಭಟನೆಗಿಳಿದು ಆರು ದಿನಗಳು ಕಳೆದರೂ, ನಿರೀಕ್ಷಿತ ಫಲ ಸಿಗಲಿಲ್ಲ. ಮುಂದಿನ ಹೋರಾಟ ತಂತ್ರವಾಗಿ ಕೇರಳ ಸರಕಾರದ ಸಚಿವಾಲಯದೆದುರು ಗುಡಿಸಲುಗಳು ಪ್ರತ್ಯಕ್ಷವಾದವು.

ದಿನಗಳೆದಂತೆ 18 ಗುಡಿಸಲುಗಳು ಸಚಿವಾಲಯದೆದುರು ಹಾಗೂ ಒಂದು ಗುಡಿಸಲು ಮುಖ್ಯಮಂತ್ರಿಯವರ ನಿವಾಸದೆದುರು ನೆಲೆ ನಿಂತವು. ಪ್ರತಿದಿನವೂ 450ಕ್ಕೂ ಹೆಚ್ಚು ಮಂದಿ ಗುಡಿಸಲುಗಳಲ್ಲಿ ಕುಳಿತು ಮುಷ್ಕರ ನಿರತರಾಗುತ್ತಿದ್ದರು. ಆದಿವಾಸಿ ನಾಯಕರಿಂದ ಇವರೆಲ್ಲರನ್ನು ಎಷ್ಟು ಕಾಲ ಸಾಕಿ ಸಲಹಲು ಸಾಧ್ಯ? ಕೆಲ ದಿನಗಳಿದ್ದು ಎದ್ದು ಹೋಗಬಹುದೆಂಬ ತಾತ್ಸಾರದಿಂದ ಸರಕಾರ ಆದಿವಾಸಿಗಳ ಕೂಗಿಗೆ ಕಿವಿಗೊಡಲೇ ಇಲ್ಲ.

'45 ಸಾವಿರ ಮಂದಿ ಭೂರಹಿತ ಆದಿವಾಸಿಗಳಿದ್ದಾರೆ. ಪ್ರತಿಕುಟುಂಬಕ್ಕೆ ತಲಾ ಐದು ಎಕರೆಯಂತೆ 2,25,000 ಎಕರೆ ಭೂಮಿಯನ್ನು ವಿತರಿಸಿ' ಎಂಬುದು ಆದಿವಾಸಿಗಳ ಕೂಗು. ಸರಕಾರ ನಿರ್ಲಕ್ಷಿಸಿದಷ್ಟು ಹೋರಾಟ ತೀವ್ರವಾಗಲಾರಂಭಿಸಿತು. ವಯನಾಡ್ ಜಿಲ್ಲೆಯವರೇ ಅಧಿಕ ಸಂಖ್ಯೆಯಲ್ಲಿದ್ದು ಮುಷ್ಕರ ನಿರತರಾಗಿದ್ದರು. ಇವರೊಂದಿಗೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಶಿಬಿರಾರ್ಥಿಗಳು ಬಂದು ಸೇರಲಾರಂಭಿಸಿದರು. ಸಿ.ಕೆ. ಜಾನು ಈ ಹೋರಾಟದ ನಾಯಕಿ. ಈಕೆಗೆದುರಾಗಿ ಕೆಲವು ಆದಿವಾಸಿಗಳನ್ನು ಎತ್ತಿಕಟ್ಟಿ ಒಡಕು ತರುವ ಪ್ರಯತ್ನ ನಡೆಸಿದ ಕೇರಳ ರಾಜ್ಯ ಸರಕಾರ ಮುಖಭಂಗಕ್ಕೊಳಗಾಯಿತು. ವಿವಿಧ ರಾಜಕೀಯ ಪಕ್ಷಗಳ ವೇದಿಕೆಯಡಿಯಲ್ಲಿದ್ದ ಆದಿವಾಸಿ ನಾಯಕರನ್ನು ಆಹ್ವಾನಿಸಿ ಭೂಮಿ ಬೇಡಿಕೆಗೆ ವಿರುದ್ಧವಾದ ನಿಲುವನ್ನು ಈ ಗುಂಪು ಹೊಂದುವಂತೆ ಮನವೊಲಿಸಿದ ಸರಕಾರ ಮಾತುಕತೆಯನ್ನು ಏರ್ಪಡಿಸಿತು. ಈ ಗುಂಪುಗಳು ಭೂಮಿ ಬೇಡಿಕೆಯನ್ನು ಹೊರತುಪಡಿಸಿ, ಸರಕಾರದ ಪರ ಮಾತನಾಡಿದಾಗ ಜಾನು ವ್ಯಗ್ರವಾಗಿ ಗುಡುಗಿದರು. 'ಅವರಿಗೆ ಭೂಮಿ ಬೇಡದಿದ್ದರೆ ನೀವು ಕೊಡಬೇಡಿ, ಆದರೆ ನಮಗೆ ಭೂಮಿ ಬೇಕು. ಭೂಮಿ ಸಿಗದೆ ನಾವು ಹಿಂತಿರುಗುವುದಿಲ್ಲ. ಸರಕಾರಕ್ಕೂ ಸಮಸ್ಯೆ ಬಗೆಹರಿಸುವುದು ಸುಲಭ. ಭೂಮಿ ಬೇಕಿರುವವರು ವಿರಳವಾಗಿರುವಾಗ ಭೂಮಿ, ಭೂರಹಿತರ ಗುರುತಿಸುವಿಕೆ, ವಿತರಣೆ ಇತ್ಯಾದಿಗಳೆಲ್ಲವೂ ಸುಲಭವಾಗಿ ಬಗೆಹರಿಯಲಿವೆ' ಎಂದರು. ಆದರೆ ಸರಕಾರ ಮಣಿಯಲಿಲ್ಲ. ಮಾತುಕತೆ ಮುರಿದುಬಿತ್ತು. ಸರಕಾರ ಒಟ್ಟು ಸೇರಿಸಿದ ಮಂದಿ ಜಾನುವಿನ ಹಿಂದೆ ನಡೆದು ನಿರಾಶ್ರಿತರ ಕ್ಯಾಂಪ್ ತಲುಪಿದರು. ಆದಿವಾಸಿಗಳ ಹಿತರಕ್ಷಣೆ ಬಗ್ಗೆ ವಿಭಿನ್ನ ಧೋರಣೆ ಇದ್ದ ಗುಂಪುಗಳ ಮಧ್ಯೆ ಚರ್ಚೆ, ಮಾತುಕತೆಗಳು ನಡೆದು ಒಮ್ಮತಾಭಿಪ್ರಾಯ ಮೂಡಿಬಂತು. ತಮ್ಮ ಪಕ್ಷಗಳ ಧೋರಣೆಗಳನ್ನು ಬದಿಗೊತ್ತಿ ಹೋರಾಟದ ಗೆಲುವಿಗೆ ತಾವೇನು ಮಾಡಬೇಕೆಂಬ ಪ್ರಶ್ನೆ ಮೂಡಿಬಂತು. ಹೋರಾಟ ಮತ್ತಷ್ಟು ಸಶಕ್ತವಾಯಿತು.

ಆದಿವಾಸಿಗಳು ಹಾಕಿದ ಗುಡಿಸಲುಗಳು ಆಳುವವರ ನಿದ್ರೆ ಕೆಡಿಸುತ್ತಿದ್ದವು. ಗುಡಿಸಲುಗಳನ್ನು ಕಿತ್ತು ಹಾಕಬೇಕೆನ್ನುವ ಆದೇಶ ಹೊರಬಂತು. ಪೋಲೀಸರು ಪ್ರತ್ಯಕ್ಷರಾದರು. ಪತ್ರಕರ್ತರು, ಛಾಯಾಗ್ರಾಹಕರು, ವಿಡಿಯೋ ಗ್ರಾಹಕರು, ದೂರದರ್ಶನ, ಖಾಸಗಿ ಚಾನೆಲ್‌ಗಳವರು ಗುಡಿಸಲು ಕೀಳುವ ಸಂದರ್ಭಕ್ಕಾಗಿ ಕಾದು ಕುಳಿತರು. ಸಮಾಜ ಸೇವಕರು, ಮಾನವ ಹಕ್ಕುಗಳ ಹೋರಾಟಗಾರರು, ಪ್ರಗತಿಪರ ವ್ಯಕ್ತಿಗಳು,

ಸಂಘ-ಸಂಸ್ಥೆಗಳು, ಖ್ಯಾತ ಬರಹಗಾರರು, ಬುದ್ಧಿಜೀವಿಗಳು, ಮಾಧ್ಯಮದವರು ಶಿಬಿರಕ್ಕೆ ಮುತ್ತಿಗೆ ಹಾಕಿ ಮಾನವ ಸರಪಳಿ ರಚಿಸಿದರು. ಗುಡಿಸಲು ಕೀಳುವ ಸಾಹಸಕ್ಕಿಳಿಯದ ಸರಕಾರ, ಕಂಗೆಟ್ಟು ಹಿಂದೆ ಸರಿಯಿತು.

ಮುಷ್ಕರನಿರತರಾಗಿ ತಿಂಗಳು ಕಳೆದರೂ ಸರಕಾರ ಸ್ಪಂದಿಸದಿರುವಾಗ ಆದಿವಾಸಿಗಳು ಉಪವಾಸ ಸತ್ಯಾಗ್ರಹಕ್ಕಿಳಿಯುವುದಾಗಿ ಘೋಷಿಸಿದರು. ಒತ್ತಡಕ್ಕೆ ಮಣಿದ ಸರಕಾರ ಒಂದರಿಂದ ಐದು ಎಕರೆ ಭೂಮಿ ವಿತರಿಸುವುದಾಗಿಯೂ, 2002ರ ಜನವರಿಯಿಂದಾರಂಭಿಸಿ ಡಿಸೆಂಬರ್ ಅಂತ್ಯದೊಳಗಾಗಿ ವಿತರಣಾ ಕಾರ್ಯಕ್ರಮುವನ್ನು ಪೂರೈಸುವ ನಿರ್ಧಾರವನ್ನು ಪ್ರಕಟಿಸಿತು.

ಸಚಿವಾಲಯದೆದುರು ಗುಡಿಸಲು ಹಾಕಿ ನಡೆಸಿದ ಪ್ರಥಮ ಪ್ರತಿಭಟನೆ ಇದು. ಒಂದು ಬಿಡಿಗಾಸೂ ಇಲ್ಲದೆ, ಟಿಕೆಟ್ ರಹಿತ ಪ್ರಯಾಣ ಮಾಡಿ ಜನರಿಂದಲೇ ಕೊಡುಗೆ ಸಂಗ್ರಹಿಸಿ ಶಿಬಿರದಲ್ಲಿ ಅಡುಗೆ ಸಿದ್ಧಪಡಿಸಿ, ಅಲ್ಲೇ ಉಂಡು ಅಲ್ಲೇ ಮಲಗಿದ ಅನುಭವ ಮುಷ್ಕರದಲ್ಲಿ ಪಾಲ್ಗೊಂಡವರದ್ದು. ಒಂದೂವರೆ ತಿಂಗಳ ಮಗು, 60,70 ವರ್ಷದ ಹಿರಿಯರು, ಗರ್ಭಿಣಿಯರು, ಯುವತಿಯರನ್ನು ಒಳಗೊಂಡಂತೆ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಮುಷ್ಕರ ನಿರತರಾಗಿದ್ದರು. ನಾಲ್ಕು ಲಕ್ಷಕ್ಕೂ ಅಧಿಕ ಮಂದಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ಆದಿವಾಸಿಗಳಿಗೆ ಭೂಮಿ ವಿತರಣೆಯ ನಂತರ ದಲಿತರಿಗೆ ಭೂಮಿ ಒದಗಿಸಿ ಎಂಬ ಬೇಡಿಕೆಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಆದಿವಾಸಿ ದಲಿತ ಸಮರ ಸಮಿತಿಯವರು ಮುಂದಿನ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ಕರ್ನಾಟಕ, ತಮಿಳುನಾಡಿನ ಆದಿವಾಸಿಗಳು ಕೂಡಾ ಭೂಮಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಚಳವಳಿ ರೂಪುಗೊಳ್ಳಬೇಕೆಂಬುದು ಸಮಿತಿಯ ಆಶಯ.

ಆದಿವಾಸಿಗಳು, ದಲಿತರ ಅಭಿವೃದ್ಧಿ ತಮ್ಮ ಗುತ್ತಿಗೆಯಿಂದ ಹೇಳುವ ಸಂಘ ಸಂಸ್ಥೆಗಳು, ಸರಕಾರ ಸಣ್ಣ ಪುಟ್ಟ ಸ್ಕೀಂಗಳನ್ನು ನೀಡಿ ಜನರನ್ನು ಭಿಕ್ಷುಕರನ್ನಾಗಿ ಮಾಡುವ ಬದಲು ಅವರಿಗೆ ಶಾಶ್ವತ ನೆಲೆಯೊದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬಾರದೇ? ಈ ನೆಲದಲ್ಲೂ ಇಂತಹ ಒಂದು ಬೇಡಿಕೆ ಜೀವ ತಳೆದು ಭ್ರೂಣವಾಗಿ ರೂಪುಗೊಂಡು ಆದಿವಾಸಿ ದಲಿತರ ಬಾಳಿಗೆ ಬೆಳಕಾಗಬಾರದೇ?

ಕೃಪೆ : ಜನವಾಹಿನಿ

'ಜಾನು ಮಾದರಿ' ಸಮರ

ಆದಿವಾಸಿ ಭೂ ಹೋರಾಟದ ನಾಯಕತ್ವ ವಹಿಸಿರುವ ಸಿ.ಕೆ. ಜಾನು ಎಂಬ ಹೆಸರು ಆಗಿಂದಾಗ್ಗೆ ಕೇಳಿಬರುತ್ತಿದ್ದಾಗ ಈ ಹೆಸರಿನ ಒಡತಿ ಒಬ್ಬ ಮಹಿಳೆ ಎಂಬ ಕಲ್ಪನೆ ಮೂಡಿರಲಿಲ್ಲ. ವೀಡಿಯೋ ಚಿತ್ರಿತ ಸುದ್ದಿಗಳು 'ಜಾನು' ನಾಯಕತ್ವ ಸ್ಥಾನದಲ್ಲಿರುವ ಒಬ್ಬ ಆದಿವಾಸಿ ಮಹಿಳೆ ಎಂದು ಸ್ಪಷ್ಟಪಡಿಸಿದವು. ಇಂಗ್ಲೀಷ್ ಪತ್ರಿಕೆಗಳು ಹಾಗೂ ಕೇರಳದ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳು ಭೂ ಹೋರಾಟದ ಮಜಲುಗಳನ್ನು ಬಿತ್ತರಿಸಿ ತಮ್ಮ ಹೊಣೆಗಾರಿಕೆಯನ್ನು ಮೆರೆದವು.

ಜಾನು ಎಂಬ ಹೆಸರು ಕೈರಳಿ ನಾಡಿನಾದ್ಯಂತ ಚಿರಪರಿಚಿತ. ಆತ್ಮೀಯ ವಲಯದಲ್ಲಿ 'ಸಿ.ಕೆ' ಎಂದೇ ಪ್ರಖ್ಯಾತಳಾಗಿರುವ ಈ ನಾಯಕಿ ಶಾಲೆಯ ಮೆಟ್ಟಿಲು ತುಳಿದಿಲ್ಲ. ಆದರೆ ಮಲಯಾಳಂ ಭಾಷೆಯಲ್ಲಿ ಓದಿ, ಬರೆಯುವ ಮೂಲಕ ವ್ಯವಹರಿಸಬಲ್ಲ ಚತುರೆ. ಪುರುಷಪ್ರಧಾನ ಸಮಾಜವೊಂದರಲ್ಲಿ ನಾಯಕಿಯಾಗಿ ಜವಾಬ್ದಾರಿ ವಹಿಸಿಕೊಳ್ಳಲು ಈಕೆಗೆ ಅದೇಗೆ ಸಾಧ್ಯವಾಯಿತು? ಆಕೆ ಮಹಿಳೆಯಾಗಿ ಅದೆಷ್ಟು ಸವಾಲುಗಳನ್ನು ಎದುರಿಸುತ್ತಿರುವಳೋ ಎಂಬ ಪ್ರಶ್ನೆಗಳಿಗೆ ಜಾನುವಿನಿಂದ ಉತ್ತರ ಬಯಸಿ ಹೋದ ನಾನು ಪೆಚ್ಚಾದೆ. ಆದಿವಾಸಿ ಸಮೂಹದಿಂದ ಯಾವುದೇ ಸವಾಲುಗಳೂ ಇಲ್ಲದ ಈಕೆ ಅನಭಿಷಿಕ್ತ ನಾಯಕಿ. ಸವಾಲುಗಳಿವೆ, ಆದರೆ ಅದು ಹೊರಗಿನ ಸಮಾಜದಿಂದ. ರಾಜಕೀಯ ಪಕ್ಷಗಳು ಈಕೆಯ ಚಾರಿತ್ರ್ಯವಧೆ ನಡೆಸಲು ಪ್ರಯತ್ನಿಸುತ್ತಿವೆ. ಆದರೆ ಅವುಗಳಿಗೆಲ್ಲ ಜಾನು ಸೂಜಿಮೊನೆಯಷ್ಟೂ ಬೆಲೆ ನೀಡಿಲ್ಲ. ಚಿಕ್ಕ ಪ್ರಾಯದಿಂದಲೇ ಆದಿವಾಸಿ ಸಮೂಹದ ಮೇಲೆ ನಡೆಯುವ ದೌರ್ಜನ್ಯಗಳನ್ನು ಪ್ರಶ್ನಿಸಿ ಪ್ರತಿಭಟಿಸುತ್ತಿದ್ದಳು. ಯೌವನಕ್ಕೆ ಕಾಲಿಡುತ್ತಿದ್ದಂತೆಯೇ ಕಾಫಿ ತೋಟ, ಗದ್ದೆಗಳಲ್ಲಿ ಕೂಲಿ ಕೆಲಸ ಮಾಡಲಾರಂಭಿಸಿದಳು. ಅಂದಿನಿಂದಲೇ ಎಡಪಂಥೀಯ ಪಕ್ಷಗಳ ಒಡನಾಟ ಆರಂಭವಾಯಿತು. ತಾನು ನಂಬಿದ ಪಕ್ಷದೊಳಗೆ ಆದಿವಾಸಿಗಳ ಮೇಲೆ ಅನ್ಯಾಯಗಳು ನಡೆದಾಗ ಪ್ರತಿಭಟಿಸುತ್ತಿದ್ದಾಕೆ ಕೊನೆಗೊಮ್ಮೆ ಬೇಸತ್ತು ಪಕ್ಷದಿಂದ ಹೊರನಡೆದರು.

ಆದಿವಾಸಿಗಳಿಗೆ ಸರಕಾರ ಕೊಡುವ ಕೋಳಿ, ಕುರಿ, ಮೇಕೆ ಶೌಚಾಲಯಗಳಂತಹ ಯೋಜನೆಗಳ ಬದಲು ಅವರ ಶಾಶ್ವತ ಉಳಿವಿಗಾಗಿ ಭೂಮಿಯನ್ನು ಹೊಂದುವುದೊಂದೇ ಮಾರ್ಗವೆಂದು ಮನವರಿಕೆಯಾದ ಜಾನು ಆ ನಿಟ್ಟಿನಲ್ಲಿ ಹೆಜ್ಜೆ ಇಟ್ಟರು. ಈ ಹೆಜ್ಜೆ ಜಾಡು ಜಾನುವನ್ನು ನಾಯಕಿಯಾಗಿ ರೂಪಿಸಿತು. ಔಪಚಾರಿಕ ಶಿಕ್ಷಣ-ಜನಸಂಘಟನೆ ಹಾಗೂ ನಾಯಕತ್ವಕ್ಕೆ ಒಂದು ಅರ್ಹತೆ ಅಥವಾ ಅನಿವಾರ್ಯ ಅಗತ್ಯ ಎಂಬ ವಾದವನ್ನು ಅಲ್ಲಗಳೆಯಲು ಜಾನು ಒಂದು ಮಾದರಿ, ನಿದರ್ಶನ. ತಾನು ಓದದೆ ಇದ್ದುದು ಒಳ್ಳೆಯದಾಯಿತು. ಓದಿದ್ದಿರೆ, ಯಾವುದೋ ಒಂದು ಚಿಕ್ಕ ಕೆಲಸಕ್ಕೆ ಸೇರಿ ಕೊಳ್ಳುತ್ತಿದೆ. ಇಂತಹ ಹೋರಾಟಗಳಲ್ಲಿ ಭಾಗವಹಿಸುವುದು ಸಾಧ್ಯವಾಗುತ್ತಿರಲಿಲ್ಲ. ಈಗ ಜನರೊಂದಿಗೆ ಬೆರೆಯುತ್ತಾ, ಅನುಭವದಿಂದ ಸಾಕಷ್ಟು ಕಲಿಯುತ್ತಿದ್ದೇನೆ. ಪುಸ್ತಕಗಳಲ್ಲಿಲ್ಲದ ಮಾನವೀಯ ಸಂಬಂಧಗಳನ್ನು ಇಲ್ಲಿ ಕಲಿಯಲು ಸಾಧ್ಯ ಎನ್ನುತ್ತಾರೆ ಜಾನು.

ಸಾಧನೆಯ ಸಂತಸದಲ್ಲಿ ಕರ್ನಾಟಕ

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ

ಕರ್ನಾಟಕ ಸರ್ಕಾರವು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರತಿಯೊಬ್ಬರಿಗೆ ದಿನವೊಂದಕ್ಕೆ 55 ಲೀಟರ್ (ಎಲ್‌ಪಿಸಿಡಿ)ಗಳಷ್ಟು ಸುರಕ್ಷಿತ ನೀರನ್ನು ಪೂರೈಸಲು ಕಂಕಣಬದ್ಧವಾಗಿದೆ.

★ ಒಟ್ಟು 56682 ಜನವಸತಿಗಳಲ್ಲಿ 31668 ಜನವಸತಿಗಳಿಗೆ 55 ಎಲ್‌ಪಿಸಿಡಿ ನೀರನ್ನು ಈಗಾಗಲೇ ಒದಗಿಸಲಾಗಿದೆ. ಉಳಿದ ಜನ ವಸತಿಗಳಿಗೆ ಮುಂದಿನ ಎರಡು ವರ್ಷಗಳಲ್ಲಿ ತಲಾ 55 ಲೀಟರ್ ನೀರು ಪೂರೈಕೆ.

★ ಕಳೆದ ಒಂದು ವರ್ಷದ ಅವಧಿಯಲ್ಲಿ 2600 ಕೊಳವೆ ನೀರು ಸರಬರಾಜು ಯೋಜನೆ ಹಾಗೂ ಕಿರಿನೀರು ಸರಬರಾಜು ಯೋಜನೆ ಹಾಗೂ 4000 ಕೈ ಪಂಪು ಕೊಳವೆ ಬಾವಿಗಳ ಮೂಲಕ 3000ಕ್ಕೂ ಹೆಚ್ಚು ಗ್ರಾಮಗಳಿಗೆ ಕುಡಿಯುವ ನೀರು ಸೌಲಭ್ಯ.

★ ಈ ವರ್ಷ ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ ರೂ. 345.55 ಕೋಟಿ ಮೀಸಲು.

★ ಗ್ರಾಮೀಣ ಪರಿಸರ ನೈರ್ಮಲ್ಯದ ಉದ್ದೇಶದೊಂದಿಗೆ "ಸ್ವಚ್ಛ ಗ್ರಾಮ ಯೋಜನೆ" ಜಾರಿ. ರಸ್ತೆ ಚರಂಡಿ ಹಾಗೂ ಶೌಚಾಲಯ ಸೌಲಭ್ಯಗಳು. ಹೊಗೆರಹಿತ ಒಲೆ ಸರಬರಾಜು. ಗ್ರಾಮಗಳ ಹೊರವಲಯಗಳಿಗೆ ಗೊಬ್ಬರ ಗುಂಡಿಗಳ ಸಾಗಾಣಿಕೆ ಇವು ಈ ಯೋಜನೆಯ ಪಂಚಸೂತ್ರಗಳು. ಈ ವರ್ಷ ಒಟ್ಟು ರೂ. 200 ಕೋಟಿ ಮೊತ್ತದಲ್ಲಿ 1000 ಗ್ರಾಮಗಳಲ್ಲಿ ಈ ಯೋಜನೆ ಅನುಷ್ಠಾನ.

★ ನಿರ್ಮಲ ಗ್ರಾಮ ಯೋಜನೆಯಡಿ 7.48 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕಾಗಿ ಸಹಾಯಧನ ನೀಡಿಕೆ.

★ ಗ್ರಾಮೀಣ ಪ್ರದೇಶಗಳಲ್ಲಿ ಕುಟುಂಬ ಶೌಚಾಲಯ ನಿರ್ಮಾಣಕ್ಕಾಗಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ರೂ. 2000 ಮತ್ತು ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ರೂ. 1200ಗಳ ಸಹಾಯಧನ ಸೌಲಭ್ಯ.

★ ಈ ವರ್ಷದಿಂದ ಗ್ರಾಮೀಣ ಪ್ರದೇಶಗಳ ಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲು ಹೊಸ ಕಾರ್ಯಕ್ರಮ.

★ ವಿಶ್ವಬ್ಯಾಂಕ್ ನೆರವಿನಿಂದ ರೂ. 447 ಕೋಟಿ ವೆಚ್ಚದಲ್ಲಿ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ.

★ 1105 ಗ್ರಾಮಗಳಲ್ಲಿ ಅನುಷ್ಠಾನ. 923 ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣ. ಉಳಿದ ಗ್ರಾಮಗಳ ಕಾಮಗಾರಿಗಳು ಮತ್ತು ಮಾರ್ಚ್ 2001ರೊಳಗಾಗಿ ಪೂರ್ಣ.

★ ಗದಗ್, ಹಾವೇರಿ, ಧಾರವಾಡ, ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ 201 ಗ್ರಾಮಗಳಲ್ಲಿ 69.70 ಕೋಟಿ ವೆಚ್ಚದ ನೆದರ್‌ಲ್ಯಾಂಡ್ ನೆರವಿನ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯ ಪೂರ್ಣ.

★ ಮೈಸೂರು, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾಯೋಗಿಕ ಸಮುದಾಯ ಆಧಾರಿತ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಅನುಷ್ಠಾನ. ಇದಕ್ಕಾಗಿ ರೂ. 152 ಕೋಟಿ ಮೀಸಲು.

★ ಮುಂದಿನ 4 ವರ್ಷಗಳ ಅವಧಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲೀಕರಣಕ್ಕಾಗಿ ರೂ. 4,444 ಕೋಟಿ ಮೀಸಲು.

★ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಕುರಿತು ಸಮೀಕ್ಷೆ, ಸರಾಸರಿ ಶೇ. 93 ಯೋಜನೆಗಳು ಸುವ್ಯವಸ್ಥಿತ ಕಾರ್ಯಾಚರಣೆಗಳಲ್ಲಿರುವುದು ದೃಢೀಕರಣ.

★ ರಾಜ್ಯಾದ್ಯಂತ ಕುಡಿಯುವ ನೀರಿನ ಮೂಲಗಳ ಗುಣಮಟ್ಟ ಪರೀಕ್ಷೆ ಕಾರ್ಯಕ್ರಮ ಜಾರಿ. ಈ ವರ್ಷ 2 ಲಕ್ಷ ಮೂಲಗಳ ಸಮೀಕ್ಷೆಯ ಗುರಿ. ಈಗಾಗಲೇ 7,400 ಮೂಲಗಳ ಗುಣಮಟ್ಟ ಪರೀಕ್ಷೆ ಸಂಪೂರ್ಣ.

★ ರಾಜ್ಯದ 192 ಸಮಸ್ಯಾತ್ಮಕ (ಅಧಿಕ ಫ್ಲೋರೈಡ್ / ಅಧಿಕ ಲವಣಾಂಶ ಇತ್ಯಾದಿ ಕಾರಣಗಳಿಂದ ಕಲುಷಿತ ಗೊಂಡಿರುವ) ಗ್ರಾಮೀಣ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರಿನ ಸರಬರಾಜಿಗಾಗಿ 'ಸಬ್‌ಮಿಷನ್' ವಿಶೇಷ ಕಾರ್ಯಕ್ರಮ ಜಾರಿ.

ನೀರು ಅಮೂಲ್ಯ - ಅಗತ್ಯಕ್ಕೆ ತಕ್ಕಂತೆ ಬಳಸಿ, ಪೋಲಾಗದಂತೆ ಉಳಿಸಿ ನಿರ್ಮಲ ಪರಿಸರವೇ ನಿರ್ಮಲ ಮನಸ್ಸಿಗೆ ಮೂಲ ಸಾಧಿಸಿದ್ದು ಬಹಳಷ್ಟು, ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು

- ಕರ್ನಾಟಕ ವಾರ್ತೆ

ಮಹಿಳಾ ಚಳುವಳಿಯ ಮಹಾನ್ ಚೇತನ ಕಾಂ। ಸುಶೀಲಾಗೋಪಾಲನ್

- ಕೆ. ಎನ್. ವಿಮಲ

ಭಾರತದ ಮಹಿಳಾ ಚಳುವಳಿಗಾಗಿ ತಮ್ಮ ಬದುಕನ್ನೇ ಧಾರೆ ಎರೆದವರು ಅದೆಷ್ಟೋ ಮಂದಿ. ಸ್ವಾತಂತ್ರ ಪೂರ್ವದಲ್ಲಿಯೇ ಮಹಿಳಾ ಸಮಾನತೆಯ ಕನಸುಗಳನ್ನು ಕಟ್ಟಿ. ಆ ದಿಸೆಯಲ್ಲಿ ಚಟುವಟಿಕೆ ಪ್ರಾರಂಭಿಸಿದವರ ಇತಿಹಾಸವೇ ನಮ್ಮ ಮುಂದಿದೆ. ಅಂತಹ ಪ್ರಮುಖ ವ್ಯಕ್ತಿಗಳಲ್ಲಿ ಸುಶೀಲಾ ಗೋಪಾಲನ್ ಒಬ್ಬರು.

1929ರ ಡಿಸೆಂಬರ್ 29ರಂದು ಕೇರಳದ ತ್ರಿಚೂರು ಜಿಲ್ಲೆಯ ಇಂಚುಮುಡಿ ಹಳ್ಳಿಯಲ್ಲಿ ಜನಿಸಿದ ಸುಶೀಲಾರದು ಪ್ರಾರಂಭದಿಂದಲೂ ಹೋರಾಟಕ್ಕೆ ಮುಖಾಮುಖಿಯಾದ ಬದುಕು. ತಂದೆ ವೇಲು ಕುಟ್ಟಿ. ತಾಯಿ ಮಾಧವಿ ಅಮ್ಮ. ನಾಲ್ವರು ಮಕ್ಕಳಲ್ಲಿ ಕೊನೆಯವಳಾಗಿ ಹುಟ್ಟಿದವರು ಸುಶೀಲಾ. ಕುಟುಂಬದಲ್ಲಿ ಉದ್ಭವಿಸಿದ ಸಮಸ್ಯೆಗೆ ಸಿಡಿದ ತಾಯಿ ಮಕ್ಕಳೊಂದಿಗೆ ಹುಟ್ಟಿದ ಮನೆಗೆ ತೆರಳಿದರು. ಅಲ್ಲಿ 'ಕಮ್ಯುನಿಸ್ಟ್ ನೇತಾರರಾಗಿದ್ದ ಸೋದರ ಮಾವ ಕರುಣಾಕರನ್‌ರವರ ಪ್ರಭಾವದಿಂದ ಎಡ ಚಳುವಳಿಗೆ ಸೆಳೆಯಲ್ಪಟ್ಟರು. ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ ಚಳುವಳಿ ಕೂಡ ಸುಶೀಲಾರ ಮೇಲೆ ಗಾಢ ಪ್ರಭಾವಬೀರಿತು - ಹದಿ ಹರೆಯದವರಿದ್ದಾಗಲೇ ಅವರಲ್ಲಿದ್ದ ನಾಯಕತ್ವದ ಗುಣ ಕಂಡು ಬರುತ್ತಿತ್ತು. ನಾರಿನ ಕೆಲಸಗಾರರು ತಮ್ಮ ಬೇಡಿಕೆಗಾಗಿ ಮುಷ್ಕರ ನಡೆಸುತ್ತಿದ್ದಾಗ ಅವರನ್ನುದ್ದೇಶಿಸಿ ಭಾಷಣ ಮಾಡಿದ್ದರು ಸುಶೀಲಾ. ಆಗ ಅವರಿನ್ನೂ ಹುಡುಗಿ. 40ರ ದಶಕದಲ್ಲಿ ಕಮ್ಯುನಿಸ್ಟರ ಮೇಲೆ ಕ್ರೂರ ಧಾಳಿ, ದಬ್ಬಾಳಿಕೆಗಳು ನಡೆಯುತ್ತಿದ್ದಾಗ ಸುಶೀಲಾ ಅತ್ಯಂತ ಉಪಯುಕ್ತ ಸಹಾಯಕಿಯಾಗಿ ಅಂದಿನ ನಾಯಕರಿಗೆ ಸೇವೆ ಸಲ್ಲಿಸುತ್ತಿದ್ದರು. ಭೂಗತರಾಗಿದ್ದ ನಾಯಕರು ಮತ್ತು ಇತರರ ಮಧ್ಯೆ ಜೀವದ ಹಂಗು ತೊರೆದು ಸಂಪರ್ಕ ಕೊಂಡಿಯಾಗಿ ಕೆಲಸ ಮಾಡಿದವರು ಸುಶೀಲಾ. ಎಡ ಚಳುವಳಿಯ ಧೀಮಂತ ನಾಯಕ ಎ.ಕೆ. ಗೋಪಾಲನ್‌ರವನ್ನು ಅವರು ಭೇಟಿಯಾಗಿದ್ದು ಆಗಲೇ. ನಂತರ 1952ರಲ್ಲಿ ಅವರೊಡನೆ ವಿವಾಹವಾಯಿತು. ಮೊಹಮ್ಮದಲ್ಲಿ ಪ್ರೌಢ ಶಾಲೆಯ ವಿದ್ಯಾಭ್ಯಾಸ ಮುಗಿಸಿದ ಅವರು ತ್ರಿಚೂರಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಲೇಜು ಸೇರಿದರು. ಎಲ್ಲ ರೀತಿಯ ಪ್ರಜಾಸತಾತ್ಮಕ ಚಳುವಳಿಯನ್ನು ಹತ್ತಿಕ್ಕುತ್ತಿದ್ದ ಕಾಲವದು. ವಿದ್ಯಾರ್ಥಿ ಸಂಘಟನೆಯ ಮೇಲಿನ ನಿಷೇಧವನ್ನು ತಿರಸ್ಕರಿಸಿ ಸಂಘಟನೆ ಕಟ್ಟಿದರೆಂಬ ಕಾರಣಕ್ಕೆ ಕಾಲೇಜಿನಿಂದ ಹೊರಹಾಕಲ್ಪಟ್ಟರು. ನಂತರ ಅವರು ಅಲೆಪ್ಪಿಯಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿದರು. ಅವರ 18ನೇ ವಯಸ್ಸಿನಲ್ಲಿಯೇ ಅವರು ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರೆಂಬುದು ಅವರ ಹೋರಾಟದ ಬದುಕಿನ ಆಯ್ಕೆ ಎಷ್ಟು ಗಟ್ಟಿಯಾಗಿತ್ತು. ಎಂಬುದು ಅರ್ಥವಾಗುತ್ತದೆ ಮತ್ತು ಈ ಆಯ್ಕೆ ಅವರನ್ನದೆಷ್ಟು ಬಾರಿ ಜೈಲಿಗೆ ಕಳಿಸಿತೋ ಲೆಕ್ಕವಿಲ್ಲ. ಅವರ ಬದುಕಿನುದ್ದಕ್ಕೂ ಈ ಶ್ರೇಣೀಕೃತ ಸಮಾಜದಲ್ಲಿ ಅಸಮಾನತೆಯ ವಿರುದ್ಧ ಹೋರಾಡ ನಡೆಸುತ್ತಲೇ ಇದ್ದ ಸುಶೀಲಾ ಗೋಪಾಲನ್, ಮಹಿಳಾ ಹಕ್ಕುಗಳನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಿದ್ದರು ಸಿಕ್ಕ ಅವಕಾಶಗಳನ್ನೆಲ್ಲ ಅವರು ಮಹಿಳೆಯರ ಹಕ್ಕುಗಳ ವಾದ ಮಂಡನೆಗೆ ಸಮರ್ಥಿಸಿ ಬಳಸಿಕೊಳ್ಳುತ್ತಿದ್ದರು.

ಅವರ ರಾಜಕೀಯ ಬದುಕಿನ ಪ್ರಾಥಮಿಕ ಘಟ್ಟದಲ್ಲಿಯೇ ದುಡಿಯುವ ವರ್ಗದ ಜೊತೆ ತಮ್ಮನ್ನವರು ಗುರುತಿಸಿಕೊಂಡಿದ್ದರು. ಅಲ್ಲಿಯೂ ಅವರ ಆಯ್ಕೆ ಅತಿ ಹೆಚ್ಚು ಮಹಿಳೆಯರಿದ್ದ ನಾರಿನ ಕೆಲಸಗಾರರು. ಹಲವು ದಶಕಗಳ ಕಾಲ ಆ ಸಂಘಟನೆಗೆ ಕೆಲಸ ಮಾಡಿದ ಅವರಿಗೆ ಅಲ್ಲಿ ಸಿಕ್ಕಿದ್ದು ಅತ್ಯಂತ ಶ್ರೀಮಂತ ಅನುಭವ. ಅದೆಂದರೆ ಲಿಂಗ ಮತ್ತು ವರ್ಗ ಶೋಷಣೆ ಹೇಗೆ ಒಂದಕ್ಕೊಂದು ಕೊಂಡಿಯಾಗಿರುತ್ತದೆ ಎಂದು ಮತ್ತು ಕೇವಲ ಮಹಿಳಾ ಸಮಸ್ಯೆಗಳೆಂದು ಎತ್ತಿಕೊಂಡು ನಡೆಸುವ ಹೋರಾಟ ಒಟ್ಟು ಸಮಸ್ಯೆಗಳನ್ನು ಪರಿಹರಿಸಲಾರದು. ಈ ತಮ್ಮ ಕೇರಳ ಮಹಿಳಾ ಸಂಘಟನೆಯ ಕಾರ್ಯದರ್ಶಿಯಾಗಿದ್ದಾಗ ತಮ್ಮ ಈ ಅನುಭವವನ್ನು ಮಹಿಳಾ ಚಳುವಳಿಗೆ ಧಾರೆ ಎರೆದರು. 1981ರಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸ್ಥಾಪನೆಯಾದಾಗ ಅದರ ಸಂಸ್ಥಾಪಕ ಸದಸ್ಯೆಯಾಗಿದ್ದ ಅವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು ಮತ್ತು ಅವರ ನಿಧನಕ್ಕೆ ಸ್ವಲ್ಪ ಮುಂಚಿನವರೆಗೂ ಅಖಿಲ ಭಾರತ ಅಧ್ಯಕ್ಷೆಯಾಗಿ ಕೆಲಸ ಮಾಡಿದರು. 3 ಬಾರಿ ಸಂಸತ್ ಸದಸ್ಯೆಯಾಗಿ ಆಯ್ಕೆಯಾಗಿದ್ದ ಸುಶೀಲಾ ಗೋಪಾಲನ್‌ರವರು ಗೀತಾಮುಖರ್ಜಿ. ಪ್ರಮೀಳಾ ದಂಡವತೆಯವರೊಡನೆ ಸಂಸತ್ತಿನಲ್ಲಿ ಮಹಿಳಾ ಪರವಾದ ಹಲವು ಕಾನೂನು. ಸುಧಾರಣೆಗಳು ಬರುವಂತೆ ಮಾಡುವಲ್ಲಿ ಸಫಲರಾದರು. 1995ರಲ್ಲಿ ಕೇರಳ ಶಾಸನ ಸಭೆಗೆ ಆಯ್ಕೆಯಾದ ಅವರು ಕಳೆದ ಚುನಾವಣೆಯವರೆಗೂ ಕೇರಳದ ಕೈಗಾರಿಕಾ ಮತ್ತು ಸಮಾಜಕಲ್ಯಾಣ ಇಲಾಖೆಯ ಮಂತ್ರಿಯಾಗಿ ಸೇವೆಸಲ್ಲಿಸಿದರು.

ಅವರ ಪ್ರಯತ್ನದಿಂದ - ಮಹಿಳಾ ಚಳುವಳಿಯ ಬಹುದಿನದ ಬೇಡಿಕೆಯಾದ ''ಮಹಿಳಾ ಆಯೋಗಕ್ಕೆ ಶಾಸನ ಬದ್ಧಹಕ್ಕು'' ಕೇರಳ ಆಯೋಗಕ್ಕೆ ಸಿಗಲು ಸಾಧ್ಯವಾಯಿತು. ಇಂದಿಗೂ ಕೇರಳ ರಾಜ್ಯದಲ್ಲಿ ಮಾತ್ರ ಈ ಹಕ್ಕು ಸಿಕ್ಕಿದೆ. ಹೀಗೇ ಅವರ ಕೆಲಸಗಳನ್ನು ಮಹಿಳಾ ಚಳುವಳಿಗೆ ಅವರ ಕೊಡುಗೆಯನ್ನು ಬರೆಯುತ್ತಾ ಹೋದರೆ.. ಅಂತ್ಯವಿಲ್ಲ.. ಆದರೆ-ಕ್ರೂರ ಕ್ಯಾನ್ಸರ್ ರೋಗ ಅವರ ಬದುಕಿಗೊಂದು ಅಂತ್ಯವನ್ನು ಕಾಣಿಸಿಬಿಟ್ಟಿತು. 2 ವರ್ಷಗಳ ಕಾಲ ಈ ಭೀಕರ ರೋಗದೊಂದಿಗೆ ಸೆಣಸಿದ ಸುಶೀಲಾ 19-12-2001ರಂದು ಭಯಂಕರ ರೋಗಕ್ಕೆ ಸೋಲೊಪ್ಪಬೇಕಾಯಿತು. ಅವರ ಬದುಕು ಅಂತ್ಯವಾಗುವಾಗ ಅವರು ಸಿ.ಪಿ.ಐ. (ಎಂ)ನ ಕೇಂದ್ರ ಸಮಿತಿಯ ಸದಸ್ಯೆಯಾಗಿದ್ದರು. ಸಿ.ಪಿ.ಟಿ.ಯು.ನ ಅಖಿಲ ಭಾರತ ಉಪಾಧ್ಯಕ್ಷೆಯಾಗಿದ್ದರು. ಅವರಿಂದು ನಮ್ಮ ಜೊತೆ ಇಲ್ಲ. ಆದರೆ ಅವರಿತ್ತ ಸ್ಫೂರ್ತಿ, ಬದ್ಧತೆ.. ನಮ್ಮನ್ನು ಮಹಿಳಾ ಚಳುವಳಿಯೊಂದಿಗೆ ಕರೆದೊಯ್ಯಬೇಕು. ಅದು ಅವರಿಗೆ ನಾವು ಸಲ್ಲಿಸುವ ಶ್ರದ್ಧಾಂಜಲಿ.

◆

ಕ್ರಿಶ್ಚಿಯನ್ ವಿವಾಹ ವಿಚ್ಛೇದನೆ

- ಹೇಮಲತಾ ಮಹಿಷಿ

ಇತ್ತೀಚೆಗೆ 2001ನೇ ಇಸವಿಯಲ್ಲಿ ಜಾರಿಗೆ ಬಂದ, ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳಿಗೆ ಅನ್ವಯಿಸುವ ವಿವಾಹ ವಿಚ್ಛೇದನ ಹೊಸ ಕಾನೂನು, ನಿಜಕ್ಕೂ ಮಹಿಳಾ ಹೋರಾಟಕ್ಕೆ ಸಿಕ್ಕ ವಿಜಯವೆಂದೇ ಹೇಳಬೇಕು. 1869ರಲ್ಲಿ ಬ್ರಿಟೀಷ್ ಸರ್ಕಾರ ಜಾರಿಗೆ ತಂದಿದ್ದ ಭಾರತೀಯ ವಿವಾಹವಿಚ್ಛೇದನ ಅಧಿನಿಯಮ ಮಹಿಳೆಯರ ವಿರುದ್ಧ ಎಷ್ಟೇ ತಾರತಮ್ಯ ಧೋರಣೆಗಳನ್ನು ಹೊಂದಿದ್ದರೂ, ಅದನ್ನು ತಿದ್ದುಪಡಿ ಮಾಡಲಾಗದೇ ಸ್ವಾಸಂತ್ರ್ಯಾನಂತರವೂ ಅದನ್ನು ಉಳಿಸಿಕೊಂಡು ಬಂದು, 132 ವರ್ಷಗಳ ನಂತರ ಅದನ್ನು ಬದಲಾಯಿಸುವ ಧೈರ್ಯವನ್ನು ಸರ್ಕಾರ ತೋರಿಸಿರುವುದು ಸಂತೋಷದ ವಿಷಯ.

ಈ ಬದಲಾವಣೆಯ ಇತಿಹಾಸವೂ ಕುತೂಹಲ ಕಾರಿಯಾಗಿದೆ. 1852ನೇ ಇಸವಿಯಲ್ಲಿ ಬ್ರಿಟನ್‌ನಲ್ಲಿ ಜಾರಿಯಲ್ಲಿದ್ದ ಕಾನೂನನ್ನು ಆಧರಿಸಿ ನಮ್ಮ ದೇಶದಲ್ಲಿಯೂ 1869ರಲ್ಲಿ ಕ್ರಿಶ್ಚಿಯನ್ ಧರ್ಮಿಯರಿಗೆ ಸಂಬಂಧಿಸಿದ ವಿವಾಹ ವಿಚ್ಛೇದನ ಕಾನೂನನ್ನು ಜಾರಿಗೆ ತರಲಾಗಿತ್ತು. ಆದರೆ, ಮುಂದೆ 1923ರಲ್ಲಿ ಬ್ರಿಟನ್ ದೇಶವೇ ಆ ಕಾನೂನು ಕಾಲಕ್ಕೆ ತಕ್ಕಂತೆ ಇಲ್ಲವೆಂದು ಅದನ್ನು ಕೈ ಬಿಟ್ಟಿದ್ದರೂ ನಮ್ಮ ದೇಶದಲ್ಲಿ ಮಾತ್ರ ಅದೊಂದು ಅತ್ಯಂತ ಪವಿತ್ರ ಧರ್ಮಶಾಸ್ತ್ರವೆಂಬಂತೆ ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಲಾಯಿತು. ನಮ್ಮ ಸಂವಿಧಾನವೂ ಮತೀಯ ಕಾನೂನು (ಪರ್ಸನಲ್ ಲಾ) ಗಳಿಗೆ ಮಾನ್ಯತೆ ಕೊಟ್ಟು, ವಿವಾಹ, ವಿಚ್ಛೇದನ, ಮಕ್ಕಳು, ಜೀವನಾಂಶ, ಆಸ್ತಿಹಕ್ಕಿಗೆ ಸಂಬಂಧಿಸಿದಂತೆ ಏಕರೂಪದ ಸಿವಿಲ್ ಸಂಹಿತೆ ಜಾರಿಗೆ ಪರದೇ, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿಗಳು ಅವರವರದೇ ಆದ ಮತೀಯ ಕಾನೂನುಗಳ ವ್ಯಾಪ್ತಿಗೆ ಒಳಪಡುವರೆಂದು ತಿಳಿಸಿದೆ. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿಯಲ್ಲಿ ರಾಜ್ಯವು ಏಕರೂಪದ ಸಿವಿಲ್ ಸಂಹಿತೆಯನ್ನು ಜಾರಿಗೆ ತರಲು ಪ್ರಯತ್ನಿಸಬೇಕೆಂದು ಸಂವಿಧಾನ ನಿರ್ದೇಶನ ನೀಡಿದ್ದರೂ ಅದು ಕೇವಲ ಆಶಾಭಾವನೆಯಾಗಿ ಉಳಿಯಿತೇ ವಿನಃ ಕಾರ್ಯಸಾಧುವೆನಿಸಲಿಲ್ಲ.

ಇತ್ತೀಚಿನ ಒಂದು ಮೊಕದ್ದಮೆಯಲ್ಲಿ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಏಕರೂಪದ ಸಿವಿಲ್ ಸಂಹಿತೆ ಜಾರಿಗೆ ತರಬೇಕೆಂದು ನಿರ್ದೇಶನ ನೀಡಿದರೂ, ಇನ್ನೊಂದು ಮೊಕದ್ದಮೆಯಲ್ಲಿ ಸರ್ಕಾರದ ಹಿಂಜರಿತವನ್ನು ಗಮನಿಸಿ, ಅದು ನಿರ್ದೇಶನವಲ್ಲವೆಂದೂ ಕೇವಲ ಸೂಚನೆಯೆಂದೂ, ಅದನ್ನು ಜಾರಿಗೆ ತರುವುದು ಸರ್ಕಾರಕ್ಕೆ ಬಿಟ್ಟಿದ್ದೆಂದೂ ತಿಳಿಸಿತು.

ಈ ರೀತಿಯ ಹಿಂಜರಿಕೆಗೆ ಮುಖ್ಯಕಾರಣ, ನಮ್ಮ ದೇಶದಲ್ಲಿರುವ ವಿಚಿತ್ರ ಪರಿಸ್ಥಿತಿ, ಮುಸ್ಲಿಂ-ಕ್ರಿಶ್ಚಿಯನ್ ಧರ್ಮಿಯರ ಅಥವಾ ಅವರಿಗೆ ಆರೋಪಿಸಿರುವ ಅಲ್ಪಸಂಖ್ಯಾತ ಮನೋಭೂಮಿಕೆ ಹಾಗೂ ಅದನ್ನು ಆಧರಿಸಿದ ಅಭದ್ರತೆ. ಅಲ್ಪ ಸಂಖ್ಯಾತರಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಬಹುಸಂಖ್ಯಾತ ಹಿಂದೂಗಳು, ಅವರ ಸರ್ಕಾರ ತಲೆಹಾಕಬಾರದೆನ್ನುವ ಭಾವನೆ, ಅದರಿಂದ ತಮ್ಮ ಅನನ್ಯತೆಗೆ, ಧರ್ಮ ಸಂಸ್ಕೃತಿಗೆ ಧಕ್ಕೆ ತಗುಲತ್ತದೆನುವ ಭಾವನೆ. ಅಲ್ಪಸಂಖ್ಯಾತರೆಲ್ಲರಲ್ಲಿ ಈ ಭಾವನೆ ಇದೆಯೋ ಇಲ್ಲವೋ, ಆದರೆ, ಅವರ ಧಾರ್ಮಿಕ ಮುಖಂಡರು ಮಾತ್ರ ಇದನ್ನೇ ಪ್ರತಿಬಿಂಬಿಸುತ್ತಾ ಬಂದರು. ಜನಸಾಮಾನ್ಯರ ಪ್ರತಿನಿಧಿಗಳು ತಾವೆಂಬಂತೆ ಯಾವುದೇ ಬದಲಾವಣೆಯನ್ನು ಬಲವಾಗಿ ವಿರೋಧಿಸಿದರು. ಹಾಗಾಗಿ ಕ್ರಿಶ್ಚಿಯನ್ ವಿವಾಹ ವಿಚ್ಛೇದನದ ಕಾನೂನಿನಲ್ಲಿ ಮಹಿಳೆಯರ ವಿರುದ್ಧ ಎಷ್ಟೇ ತಾರತಮ್ಯ ಧೋರಣೆ ಇದ್ದರೂ, ಗಂಡ ಹೆಂಡತಿಯರ ನಡುವೆ ಎಷ್ಟೇ ವೈಷಮ್ಯವಿದ್ದು ವಿಚ್ಛೇದನ ಪಡೆಯುವುದು ಅಸಾಧ್ಯವಾಗಿದ್ದರೂ ಕಾನೂನಿನ ತಿದ್ದುಪಡಿಯನ್ನು ಚರ್ಚುಗಳು ಬಲವಾಗಿ ವಿರೋಧಿಸುತ್ತಾ ಬಂದವು.

1975ರ ಅಂತರರಾಷ್ಟ್ರೀಯ ಮಹಿಳಾ ವರ್ಷದ ಘೋಷಣೆಯ ನಂತರ ಮಹಿಳಾ ಸಂಘಟನೆ, ಹೋರಾಟಕ್ಕೆ ಚಾಲನೆ ದೊರೆತು, ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ, ತಮ್ಮ ವಿರುದ್ಧದ ತಾರತಮ್ಯ ಧೋರಣೆಯ ಬಗ್ಗೆ ಅರಿವು ಬೆಳೆಸಿಕೊಂಡಾಗ ಅಲ್ಪಸಂಖ್ಯಾತ ವರ್ಗದ ಮಹಿಳೆಯಲ್ಲಿಯೂ, ಮುಖ್ಯವಾಗಿ ಕ್ರಿಶ್ಚಿಯನ್ ಮಹಿಳೆಯರಲ್ಲಿ ಜಾಗೃತಿ ಉಂಟಾಯಿತು. ಧಾರ್ಮಿಕ ಮುಖಂಡರನ್ನು, ಚರ್ಚುಗಳನ್ನು ಎದುರು ಹಾಕಿಕೊಳ್ಳದೇ, ಅವರನ್ನು ಒಲಿಸಿಕೊಂಡು ಮುಂದುವರಿಯುವ ಕಾರ್ಯತಂತ್ರ ರೂಪಿತವಾಯಿತು. ಪ್ರಾಟೆಸ್ಟೆಂಟ್ ಚರ್ಚುಗಳು ಒಪ್ಪಿದರೂ, ರೋಮನ್ ಕ್ಯಾಥೋಲಿಕ್ ಚರ್ಚುಗಳು ಒಪ್ಪಲಿಲ್ಲ. ಕ್ರಿಶ್ಚಿಯನ್ ಮಹಿಳಾ ಸಂಸ್ಥೆಗಳು ವಿಚ್ಛೇದನದ ಕಾನೂನಿನ ತಿದ್ದುಪಡಿಯ ಬಗ್ಗೆ ಸಭೆಗಳನ್ನು ನಡೆಸಿದವು. ಅಭಿಪ್ರಾಯ ರೂಪಿಸಿದವು, ಒಂದು ತಿದ್ದುಪಡಿಯ ಕರಡನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಒಪ್ಪಿಸಿದವು. ಅದನ್ನು ಖಾಸಗಿ ಮಸೂದೆಯಾಗಿಯೂ ಪಾರ್ಲಿಮೆಂಟಿನ ಮುಂದೆ ಮಂಡಿಸಲಾಯಿತು. ಎಷ್ಟೋ ಕಾಲ ಪಾರ್ಲಿಮೆಂಟಿನ

ಮುಂದೆ ನೆನೆಗುದಿಗೆ ಬಿದ್ದಿದ್ದ ಮಸೂದೆ ಕೊನೆಗೆ, ರಾಷ್ಟ್ರೀಯ ಮಹಿಳಾ ಆಯೋಗದ ಬೆಂಬಲದಿಂದ, ತೆರೆಮರೆಯ ಮಹಿಳಾ ಒತ್ತಾಯದ ಫಲವಾಗಿ 22-8-2001ರಂದು ರಾಜ್ಯಸಭೆಯಲ್ಲಿ ಪಾಸಾಗಿ, 30-8-2001ರಂದು ರಾಜ್ಯಸಭೆಯಲ್ಲಿ ಪಾಸಾಗಿ, 24-9-2001 ರಾಷ್ಟ್ರಪತಿಯವರ ಒಪ್ಪಿಗೆ ಪಡೆದು ಜಾರಿಗೆ ಬಂದಿತು. ಇಷ್ಟು ವರ್ಷಗಳ ಮಹಿಳೆಯರ ಅದರಲ್ಲೂ ಕ್ರಿಶ್ಚಿಯನ್ ಮಹಿಳೆಯರ ಹೋರಾಟ, ಫಲಪ್ರದವಾಯಿತು.

ಹೊಸ ಕಾನೂನಿನ ಮುಖ್ಯ ಅಂಶಗಳೆಂದರೆ -

1. ಮಹಿಳೆ ಮತ್ತು ಪುರುಷರಿಬ್ಬರಿಗೂ ವಿವಾಹರದ್ದು ಪಡಿಸಲು ವಿಚ್ಛೇದನ ಪಡೆಯಲು ಒಂದೇ ರೀತಿಯ ಕಾರಣಗಳು.
2. ಹಿಂದೂ ಕಾನೂನಿನಲ್ಲಿರುವಂತೆ ವಿವಾಹರದ್ದು ಪಡಿಸಲು ಕಾರಣಗಳನ್ನು ವಿಸ್ತರಿಸಿರುವುದು.
3. ವಿಚ್ಛೇದನಕ್ಕೆ ಕಾರಣಗಳನ್ನು ವಿಸ್ತರಿಸಿರುವುದು.
4. ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನ ಪಡೆಯುವುದು.
5. ವಿಚ್ಛೇದನ ಪರಿಣಾಮಗಾರಿಯಾಗಲು ಉಚ್ಚ ನ್ಯಾಯಾಲಯದ ಅನುಮೋದನೆ ಅವಶ್ಯವೆಂಬುದನ್ನು ತೆಗೆದು ಹಾಕಿರುವುದು.
6. ಗಂಡನ ಆದಾಯದ 1/5 ಭಾಗಕ್ಕೆ ಜೀವನಾಂಶವನ್ನು ಮಿತಿಗೊಳಿಸಿರುವುದನ್ನು ತೆಗೆದು ಹಾಕಿರುವುದು.

ಮೊದಲು, ''ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮ'' ಎಂದಿದ್ದ ಕಾನೂನನ್ನು ಈಗ ಕೇವಲ ''ವಿವಾಹ ವಿಚ್ಛೇದನ ಅಧಿನಿಯಮ'' ಎಂದು ಕರೆಯಲಾಗುತ್ತದೆ.

ಈ ಕಾನೂನಿನ ಕೆಳಗೆ ನ್ಯಾಯಾಲಯದಿಂದ ಪರಿಹಾರ ಕೇಳಬೇಕಾದರೆ ಅರ್ಜಿದಾರ - ಪ್ರತಿವಾದಿಗಳಲ್ಲಿ ಯಾರಾದರೊಬ್ಬರು ಕ್ರಿಶ್ಚಿಯನ್ ಧರ್ಮಿಯರಾಗಿರಬೇಕಿತ್ತು; ಮತ್ತು ವಿವಾಹವಿಚ್ಛೇದನ ಪಡೆಯಬೇಕಾದರೆ ಅರ್ಜಿ ಹಾಕುವಾಗ ಭಾರತದ ವಾಸಿಗಳಾಗಿರಬೇಕು (ಎಂದರೆ ವಿವಾಹ ಬೇರೆದೇಶದಲ್ಲಿ ಆಗಿರಬಹುದು).

ವಿವಾಹ ರದ್ದುಗೊಳಿಸಬೇಕಾದರೆ, ವಿವಾಹ ಭಾರತದಲ್ಲಿ ನಡೆದಿರಬೇಕು ಮತ್ತು ಅರ್ಜಿ ಹಾಕುವಾಗ ಅರ್ಜಿಹಾಕಿದ ವ್ಯಕ್ತಿ ಭಾರತದ ವಾಸಿಯಾಗಿರಬೇಕು;

ಮತ್ತಾವುದೇ ಪರಿಹಾರ ಪಡೆಯಲು, ಅರ್ಜಿಹಾಕಿದ ವ್ಯಕ್ತಿ ಅರ್ಜಿಹಾಕುವಾಗ ಭಾರತದ ನಿವಾಸಿಯಾಗಿರಬೇಕು.

ವಿಚ್ಛೇದನಕ್ಕೆ ಕಾರಣಗಳು :

2001ನೇ ಇಸವಿಯ ತಿದ್ದುಪಡಿಯ ಮೊದಲು ಕ್ರಿಶ್ಚಿಯನ್ ಧರ್ಮದ ಅನುಸಾರ ವಿವಾಹವಾದವರಿಗೆ ವಿಚ್ಛೇದನ ಪಡೆಯುವುದು ಬಹುಕಷ್ಟದ ಕೆಲಸವಾಗಿತ್ತು. ಗಂಡ ಹೆಂಡತಿಯ ವ್ಯಭಿಚಾರದ ಕಾರಣದ ಮೇಲೆ ವಿಚ್ಛೇದನ ಪಡೆಯಲು ಅವಕಾಶವಿದ್ದರೆ, ಹೆಂಡತಿ ವಿಚ್ಛೇದನ ಪಡೆಯಲು ಗಂಡನ ವ್ಯಭಿಚಾರದೊಂದಿಗೆ, ಅವನ ಕ್ರೌರ್ಯ, ಪರಿತ್ಯಜಿಸುವಿಕೆ, ಮತ್ತೊಂದು ವಿವಾಹ, ಅಸಹಜ ಲೈಂಗಿಕ ಸಂಬಂಧ ಇತ್ಯಾದಿಗಳನ್ನು ತೋರಿಸಬೇಕಾಗಿತ್ತು. ಗಂಡ-ಹೆಂಡತಿ ಇಬ್ಬರೂ ಒಪ್ಪಿದರೂ ವಿಚ್ಛೇದನ ದೊರಕುತ್ತಿರಲಿಲ್ಲ. ಪರಸ್ಪರ ಒಪ್ಪಿಗೆಯಿದ್ದಲ್ಲಿ ಅವರು ವಿಶೇಷ ವಿವಾಹ ಅಧಿನಿಯಯದಡಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ತಮ್ಮ ವಿವಾಹ ನೋಂದಾಯಿಸಿ, ಒಂದು ವರ್ಷ ಬೇರೆ-ಬೇರೆಯಾಗಿದ್ದು, ನಂತರ ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನ ಪಡೆಯಲು ಅರ್ಜಿ ಸಲ್ಲಿಸಬೇಕಾಗುತ್ತಿತ್ತು.

ಆದರೆ, ಈಗ ಎದುರದಾರರ ವ್ಯಭಿಚಾರ, ಬೇರೆ ಧರ್ಮಕ್ಕೆ ಮತಾಂತರ, ಕನಿಷ್ಠ ಎರಡು ವರ್ಷಗಳ ಕಾಲದ, ಗುಣಪಡಿಸಲಾಗದ ಮಾನಸಿಕ ಕಾಯಿಲೆ, ಕನಿಷ್ಠ 2 ವರ್ಷಗಳ ಕಾಲದ ಗುಣಪಡಿಸಲಾಗದ, ಸೋಂಕುಸ್ಥಿತಿಯ ಕುಷ್ಠರೋಗ / ಲೈಂಗಿಕ ಕಾಯಿಲೆ, 7 ವರ್ಷಗಳಿಗಿಂತ ಹೆಚ್ಚು ಕಾಲ ಬದುಕಿರುವ ಬಗ್ಗೆ ಮಾಹಿತಿ ಇಲ್ಲದಿರುವುದು, ವಿವಾಹ ಪೂರ್ಣಗೊಳಿಸಲು ನಿರಾಕರಿಸುವುದು, ವಿವಾಹಜೀವನ ನಡೆಸಬೇಕೆಂದು ನ್ಯಾಯಾಲಯದ ಆಜ್ಞೆಯಾದ ಮೇಲೂ ಅದನ್ನು ಪರಿಪಾಲಿಸಲು ನಿರಾಕರಿಸುವುದು, ಅರ್ಜಿಹಾಕುವ ಕನಿಷ್ಠ 2 ವರ್ಷ ಮೊದಲು ಅರ್ಜಿದಾರರನ್ನು ಪರಿತ್ಯಜಿಸಿರುವುದು, ಜೊತೆಗೆ ಜೀವಿಸಲು ಭಯವಾಗುವಂತಹ ರೀತಿಯಲ್ಲಿ ಕ್ರೌರ್ಯದಿಂದ ನಡೆದುಕೊಳ್ಳುವುದು - ಇವುಗಳನ್ನು ವಿಚ್ಛೇದನ ಪಡೆಯಲು ಪ್ರತ್ಯೇಕ ಕಾರಣಗಳನ್ನಾಗಿ ಮಾಡಲಾಗಿದೆ.

ಅದೇ ರೀತಿ, ಪತಿಯ ಅತ್ಯಾಚಾರ, ಅಸಹಜ ಲೈಂಗಿಕ ನಡವಳಿಕೆಯ ಕಾರಣಕ್ಕಾಗಿ ಪತ್ನಿ ವಿಚ್ಛೇದನ ಪಡೆಯಬಹುದು. ಮುಖ್ಯವಾಗಿ ಎರಡು ವರ್ಷಕಾಲ ಬೇರೆ-ಬೇರೆ ವಾಸಿಸಿದ ಮೇಲೆ, ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನ ಪಡೆಯಬಹುದು. (ಹಿಂದೂ ಕಾನೂನು, ವಿಶೇಷ ವಿವಾಹ ಅಧಿನಿಯಮದಲ್ಲಿ ಒಂದು ವರ್ಷದ ಪ್ರತ್ಯೇಕ ವಾಸ ಸಾಕಾಗುತ್ತದೆ)

ವ್ಯಭಿಚಾರದ ಕಾರಣಕ್ಕಾಗಿ ಅರ್ಜಿ ಹಾಕಿದ್ದರೆ, ಜೊತೆಯ ವ್ಯಕ್ತಿಯನ್ನು (ಗೊತ್ತಿದ್ದಲ್ಲಿ) ಸಹ-ಪ್ರತಿವಾದಿಯನ್ನಾಗಿ

ತೋರಿಸಬೇಕಾಗುತ್ತದೆ. ಕೆಳನ್ಯಾಯಾಲಯದಲ್ಲಿ ವಿಚ್ಛೇದನದ ಡಿಗ್ರಿಯಾದ ಮೇಲೆ ಅದನ್ನು ಹೈಕೋರ್ಟು ಅನುಮೋದಿಸುವ ಅಗತ್ಯವಿಲ್ಲ. ಆದರೆ, ತಮ್ಮ ವಿರುದ್ಧ ತೀರ್ಪು ಆದಾಗ ಗಂಡ/ಹೆಂಡತಿ, ಬೇಕಾದರೆ, ಅಪೀಲು ಹಾಕಬಹುದು (ಪರಸ್ಪರ ಒಪ್ಪಿಗೆಯಿಂದಾದ ವಿಚ್ಛೇದನ ಹೊರತುಪಡಿಸಿ)

ವಿವಾಹರದ್ದು:

ಪ್ರತಿವಾದಿ ಷಂಡವ್ಯಕ್ತಿಯಾಗಿದ್ದರೆ, ಪರಸ್ಪರರು ನಿಷೇಧಿತ ಸಂಬಂಧದಲ್ಲಿ ಬರುತ್ತಿದ್ದರೆ, ವಿವಾಹ ಸಮಯದಲ್ಲಿ ಪ್ರತಿವಾದಿ ಬುದ್ಧಿಮಾಂದ್ಯ ವ್ಯಕ್ತಿಯಾಗಿದ್ದರೆ, ವಿವಾಹದ ಸಮಯದಲ್ಲಿ ಮೊದಲು ವಿವಾಹದ ಗಂಡ/ಹೆಂಡತಿ ಬದುಕಿದ್ದರೆ ಹಾಗೂ ವೈವಾಹಿಕ ಸಂಬಂಧ ಉಳಿದಿದ್ದರೆ, ವಿವಾಹಕ್ಕೆ ಒತ್ತಾಯದಿಂದ, ಮೋಸದಿಂದ ಒಪ್ಪಿಗೆ ಪಡೆದಿದ್ದರೆ, ನೊಂದವ್ಯಕ್ತಿ ನ್ಯಾಯಾಂಗಕ್ಕೆ ಅರ್ಜಿಹಾಕಿ ವಿವಾಹವನ್ನು ಕಾನೂನು ಬಾಹಿರವೆಂದು ರದ್ದು ಗೊಳಿಸುವಂತೆ ಕೇಳಬಹುದು.

ನ್ಯಾಯಿಕ ಬೇರ್ಪಡುವಿಕೆ :

ಪ್ರತಿವಾದಿಯ ವ್ಯಭಿಚಾರ, ಕ್ರೌರ್ಯ, ಎರಡು ವರ್ಷಕಾಲದ ಪರಿತ್ಯಜಿಸುವಿಕೆಯ ಕಾರಣದ ಮೇಲೆ ಬೇರೆ-ಬೇರೆ ವಾಸಿಸುವ ಡಿಕ್ರಿ ಪಡೆಯಬಹುದು. ತನ್ನ ಆಸ್ತಿಯನ್ನು ರಕ್ಷಿಸುವ ಆಜ್ಞೆ ಪಡೆಯಬಹುದು.

ವೈವಾಹಿಕ ಹಕ್ಕುಗಳ ಪುನರ್‌ಸ್ಥಾಪನೆ :

ಸಕಾರಣವಿಲ್ಲದೇ ತನ್ನನ್ನು ಎದುರುಪಕ್ಷ ಪರಿತ್ಯಜಿಸಿದ್ದರೆ ಗಂಡ/ಹೆಂಡತಿ ಈ ರೀತಿಯ ಡಿಕ್ರಿ ಪಡೆಯಲು ಅರ್ಜಿ ಹಾಕಬಹುದು.

ಇತರ ಪರಿಹಾರಗಳು :

ಯಾವುದೇ ಅರ್ಜಿ ವಿಚಾರಣೆಯಲ್ಲಿರುವಾಗ ಪತ್ನಿ ಮಧ್ಯಕಾಲೀನ ಜೀವನಾಂಶ, ಮಕ್ಕಳ ಬಗ್ಗೆ ಜೀವನಾಂಶದ ಬಗ್ಗೆಯ ಆಜ್ಞೆಯ ಪಡೆಯಬಹುದು, ಪತಿಗೆ ಜೀವನಾಂಶ ಕೇಳುವ ಹಕ್ಕಿಲ್ಲ. ಪತ್ನಿ ಖಾಯಂ ಜೀವನಾಂಶ ಪಡೆಯಬಹುದು.

ಮರು ವಿವಾಹ :

ಅಪೀಲು ಹಾಕಿರದಿದ್ದರೆ ಅಪೀಲು ಅವಧಿ ಮುಗಿದನಂತರ, ಹಾಕಿದ್ದರೆ ಅಪೀಲು ವಜಾ ಆದನಂತರ ಗಂಡ/ಹೆಂಡತಿ ಮರುವಿವಾಹವಾಗಬಹುದು. ಆದರೆ, ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನನಾಗಿದ್ದರೆ ಕೂಡವೆ ಮರುವಿವಾಹವಾಗಬಹುದು.

ಇದೇ ರೀತಿ ಮುಸ್ಲಿಂ ಮಹಿಳೆಯರಿಂದಲೂ ಒತ್ತಾಯ ಬಂದಲ್ಲಿ ಕಾನೂನಿನ ಬದಲಾವಣೆ ಸುಲಭಸಾಧ್ಯ.

RNI No. 45577/88

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To :
Smt/Sri

CPMG/KA/BG-8/2002
Book-Post/News Letter